ಸಂಚಿಕೆ - 01

ಜೂನ್ 2026

ಅ ರಿ ವು ಭಾ ರ ತ

# ಅರಿವು ಯಾನ

ಸಮಾನತೆಗಾಗಿ
**ಸಹಭೋಜನ**

ಅರಿವಿನ ಅಲೆ



ಜೀವನ
**ಪಾಠಗಳು**

**ಅರಿವು ಭಾರತಕ್ಕೆ 12 ವರ್ಷ**

ಪ್ರತಿಜ್ಞೆ

**ಗೃಹಪ್ರವೇಶ**
**ಸಹಭೋಜನ**
**ಸಮತೆಯ ಟೀ**
**ಪ್ರತಿಜ್ಞಾವಿಧಿ**

**“ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ”**

- ಬಸವಣ್ಣ

**ದೇವಾಲಯ ಪ್ರವೇಶ**
**ಒಂದು ಬಾವಿ ಒಂದು ನೀರು**
**ಮರು ಮದುವೆ**
**ಅಸ್ಪೃಶ್ಯತೆ ಮುಕ್ತ ಮನೆ ಅಭಿಯಾನ**

| | | |
|---|---|---|
| 01 | **ಸಂಪಾದಕೀಯ**<br>ಡಾ. ಶಿವಪ್ಪ ಅರಿವು | 03 |
| 02 | **ಅರಿವಿನ ಅಲೆ**<br>ವಿ. ಎಸ್.ಎಸ್ ಶಾಸ್ತ್ರಿ | 04 |
| 03 | **ಸಾಮಾನ್ಯ ಮನುಷ್ಯನ ಘನತೆ ಮತ್ತು ದೈವತ್ವ**<br>ಡಾ. ಸಿ. ಎ. ರಮೇಶ್ | 05 |
| 04 | **ಬದುಕಿ ಬಿಡಬೇಕು ತೀವ್ರವಾಗಿ ಸಾಯುವ ಮುನ್ನ**<br>ಎಚ್.ಕೆ.ವಿವೇಕಾನಂದ | 06 |
| 05 | **ಸಮತೆಯ ಭಾರತ: ನಾಲ್ಕು ಮೆಟ್ಟಿಲು ಇಳಿಯುವ ಪ್ರೀತಿ**<br>ಡಾ. ಶಿವಪ್ಪ ಅರಿವು | 08 |
| 06 | **ಘಟ್ಟಕಾಮದೇನಹಳ್ಳಿಯ ಪ್ರೌಢಶಾಲೆಯಲ್ಲಿ ಮಕ್ಕಳಿಗೆ ಸಮಸಮಾಜದ ಪ್ರತಿಜ್ಞೆ** | 12 |
| 07 | **ಜೀವನ ಪಾಠಗಳು**<br>**ಸೋಮಯಾಜಲಹಳ್ಳಿ ಪ್ರತಿಜ್ಞೆ** | 13 |
| 08 | **ಅಗ್ರಹಾರದ ಜಯಸಿಂಹ ಅವರ ಮನೆಯಲ್ಲಿ ಸಮಾನತೆಗಾಗಿ ಸಹಭೋಜನ** | 14 |
| 09 | **ಅರಿವು ಭಾರತಕ್ಕೆ 12 ವರ್ಷ ತುಂಬಿದ ನೆನಪಿನಲ್ಲಿ ಕೃತಿ ಬಿಡುಗಡೆ** | 15 |
| 10 | **ಕೋಲಾರದಲ್ಲಿ ಪುಟ್ಟ ಮಕ್ಕಳೊಂದಿಗೆ ಅಂಬೇಡ್ಕರ್ ಜಯಂತಿ ಆಚರಣೆ ಮತ್ತು ಪ್ರತಿಜ್ಞೆ** | 17 |
| 11 | **ಮಾಲೂರಿನಲ್ಲಿ ಅಂಬೇಡ್ಕರ್ ಜಯಂತಿ: ಸಮಾನತೆ ಮತ್ತು ಸಾಮಾಜಿಕ ಜಾಗೃತಿಗೆ ಕರೆ ನೀಡಿದ ಮುಖ್ಯ ಭಾಷಣ** | 18 |
| 12 | **ದೊಮ್ಮಸಂದ್ರದಲ್ಲಿ ಬುದ್ಧ ಜಯಂತಿ: ಸಮಾನತೆಗಾಗಿ ಸಹಭೋಜನ - ಜಿಲ್ಲಾಧಿಕಾರಿ ಡಾ. ಎಂ. ಆರ್. ರವಿ ಅವರ ಮಾತು** | 19 |
| 13 | **ಆನೆಕಲ್ ಜೈಭೀಮ್ ಭವನದಲ್ಲಿ 'ಅರಿವು ಭಾರತ' ಪರಿಚಯ ಕಾರ್ಯಕ್ರಮ : ಬಿ. ಗೋಪಾಲ್ ಅವರ ಮಾತು** | 23 |
| 14 | **ಸೋಮಸುಂದರ್ ರೆಡ್ಡಿ ಅವರ ಮನೆಯಲ್ಲಿ ಸಮಾನತೆಗಾಗಿ ಸಹಭೋಜನ** | 26 |
| 15 | **ಅರಿವು ಭಾರತ ಆಶಯಗೀತೆ**<br>ಡಾ. ಎಂ. ಆರ್. ರವಿ, ಜಿಲ್ಲಾಧಿಕಾರಿಗಳು | 28 |

ಸಂಪಾದಕೀಯ

# ಬೀಜಾಕ್ಷರ



ಡಾ. ಶಿವಪ್ಪ ಅರಿವು

ಅರಿವು ಭಾರತ ಕೈಗೆತ್ತಿಕೊಂಡಿರುವ ಅಸ್ಪೃಶ್ಯತೆ ನಿರ್ಮೂಲನೆ ಕೆಲಸ ಫಲಿಸುತ್ತಿದೆ. ಅರಿವು ಭಾರತ ಒಂದು ಸಣ್ಣ ಆಲೋಚನೆಯಾಗಿ ಹುಟ್ಟಿ ಇಂದು ಸಾಮಾಜಿಕ ಚಳುವಳಿಯಾಗಿ ರೂಪತಾಳುತ್ತಿದೆ. ಅನೇಕ ಊರುಗಳಲ್ಲಿ ಜನ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅರಿವು ಭಾರತವು ಕೋಲಾರ ಜಿಲ್ಲೆ, ಕರ್ನಾಟಕ ರಾಜ್ಯ ಗಡಿಗಳನ್ನು ದಾಟಿ ತನ್ನ ವಿಶೇಷತೆಯನ್ನು ಹಲವು ಬದಲಾವಣೆಗಳ ಮುಖೇನ ತೋರಿಸುತ್ತಿದೆ.

ಒಂದು ಚಳುವಳಿ ಬೆಳೆಯುವಾಗ ಅದಕ್ಕೆ ಬೇಕಾದ ನೀರು, ಗೊಬ್ಬರ ಒದಗಿಸುವುದು ನಮ್ಮ ಪ್ರಾಥಮಿಕ ಜವಾಬ್ದಾರಿ. ಬಾಬಾ ಸಾಹೇಬ್ ಅಂಬೇಡ್ಕರ್, ಮಹಾತ್ಮ ಗಾಂಧಿ ದೊಡ್ಡ ಕೆಲಸಗಳನ್ನು ಮಾಡುವಾಗ ಪತ್ರಿಕೆಗಳನ್ನು ಆರಂಭಿಸಿ ತಮ್ಮ ಆಶಯಗಳನ್ನು ಮುಟ್ಟಿಸಬೇಕಾದವರಿಗೆ ಮುಟ್ಟಿಸುತ್ತಿದ್ದರು. “THE PRINTED WORD IS THE GREATEST WEAPON IN THE SERVICE OF HUMAN PROGRESS.” ಎಂದು ಗಾಂಧೀಜಿ ಹೇಳಿದ್ದರು. ಆ ಕಾಲದಲ್ಲಿ ಇಂಟರ್ನೆಟ್ ಇರಲಿಲ್ಲ. ಎಲ್ಲವನ್ನೂ ಭೌತಿಕವಾಗಿಯೇ ಮುದ್ರಿಸಿ ವಿತರಿಸಬೇಕಿತ್ತು. ಮುದ್ರಿತ ಪದಗಳಿಗೆ ಹೆಚ್ಚು ಬಲವಿತ್ತು. ಜನ ಶ್ರದ್ಧೆಯಿಂದ ಓದುತ್ತಿದ್ದರು. ಭಾರತ ಸ್ವತಂತ್ರ ಚಳುವಳಿಯ ಜೊತೆಜೊತೆಗೆ ಸಾಮಾಜಿಕ ಚಳುವಳಿಗಳೂ ಜನರನ್ನು ತಲುಪಿದ್ದು ಪತ್ರಿಕೋದ್ಯಮದ ಮೂಲಕವೇ. ಆಗ ಬೇರೆ ಮಾಧ್ಯಮಗಳು ಅಷ್ಟಾಗಿ ಇರಲಿಲ್ಲ. ಈಗ ಕಾಲ ಬದಲಾಗಿದೆ. ಎಲ್ಲವನ್ನೂ ಮುದ್ರಿಸುವ ಅಗತ್ಯವಿಲ್ಲ.

“SOCIAL MOVEMENTS GROW STRONGER WHEN WORDS REACH THE PEOPLE.” ಎಂಬ ಮಾತಿದೆ. ಆ WORDS ಮುಟ್ಟಬೇಕಾದವರಿಗೆ ತಲುಪಿಸಲು ONLINE ಪ್ಲಾಟ್ ಫಾರ್ಮ್ ಬಹುದೊಡ್ಡ ಅನುಕೂಲ ಕಲ್ಪಿಸಿದೆ. ಹಾಗಾಗಿಯೇ ಆನ್ಲೈನ್ ಮಾಸಪತ್ರಿಕೆಗೆ ಮುಂದಾಗಿದ್ದೇವೆ. ತಂತ್ರಜ್ಞಾನವು ಕೊನೆಯ ವ್ಯಕ್ತಿಯನ್ನು ಮುಟ್ಟುವ ಹಂತದಲ್ಲಿದೆ. ಮೊಬೈಲ್ ಈಗ ಮುಟ್ಟಿಸುವ ಸಾಧನವಾಗಿದೆ. ಹಾಗಾಗಿಯೇ ಮುದ್ರಿಸುವ ಹೊರೆಯಿಲ್ಲದ ಆನ್ಲೈನ್ ಮಾಸಿಕಕ್ಕೆ ಮುಂದಾಗಿ ಮೊದಲ ಪ್ರತಿ ನಿಮ್ಮ ಮುಂದಿಟ್ಟಿದ್ದೇವೆ. ಇದು ಸದ್ಯಕ್ಕೆ ಆಂತರಿಕ ಪರಿಚಲನೆಗಿದ್ದು, ಮುಂದೆ ವಿಸ್ತರಣೆಗೊಳ್ಳಲಿದೆ.

ಅರಿವು ಭಾರತದ ಹಿಂದಿನ ತಿಂಗಳ ಕಾರ್ಯಗಳ ವರದಿ, ಜೊತೆಗೆ ಮುಂದಿನ ದಿನಗಳ ಕಾರ್ಯಯೋಜನೆ ಹೊತ್ತುತರುವ CHRONICLE ರೀತಿಯಲ್ಲೂ ಈ ಮಾಸಿಕ ನೆರವಾಗಬಲ್ಲದು. ನಮ್ಮ ಕಾರ್ಯಕ್ರಮಗಳಲ್ಲಿ ಮಹತ್ವದ ಮಾತುಗಳನ್ನಾಡುವವರ ನುಡಿಗಳನ್ನು ಅಕ್ಷರಕ್ಕಿಳಿಸುವ ಇರಾದೆ ಇದೆ. ಈ ಸಂಚಿಕೆಯಲ್ಲಿ ಜಿಲ್ಲಾಧಿಕಾರಿ ಡಾ.ಎಂ.ಆರ್. ರವಿ ಮತ್ತು ಬಿ.ಗೋಪಾಲ್ ಅವರ ಭಾಷಣಗಳನ್ನು ಅಕ್ಷರ ರೂಪದಲ್ಲಿ ನೀಡಿದ್ದೇವೆ.

ಈ ಆನ್ಲೈನ್ ಮಾಸಿಕದಲ್ಲಿ ನಾಲ್ಕೈದು ಸರಣಿ ಬರಹಗಳು ಇರಲಿವೆ. ಸಮ ಸಮಾಜದ ಆಶಯಗಳನ್ನು ಬಲಪಡಿಸುವ ಲೇಖನಗಳನ್ನು ಒಳಗೊಳ್ಳುವುದರ ಮೂಲಕ ಚಳುವಳಿಯ ಧ್ವನಿಯನ್ನು ವಿಸ್ತರಿಸಬಯಸಿದ್ದೇವೆ. ಡಾ.ಸಿ.ಎ.ರಮೇಶ್, ಎಚ್.ಕೆ.ವಿವೇಕಾನಂದ ಮತ್ತು ನನ್ನ ಸರಣಿಯ ಮೊದಲ ಲೇಖನಗಳು ಇಲ್ಲಿ ಕಾಣಿಸಿಕೊಂಡಿವೆ. ಇನ್ನಷ್ಟು ಹೊಸ ಬರಹಗಳು ಮುಂದಿನ ಸಂಚಿಕೆಗಳಲ್ಲಿ ಬರಲಿವೆ.

ಕೋಲಾರ ಜಿಲ್ಲೆಯಲ್ಲಿ ವಿಶೇಷವಾಗಿ ಜಿಲ್ಲಾಧಿಕಾರಿಗಳಾದ ಡಾ.ಎಂ.ಆರ್. ರವಿ ಅವರು ಅತೀವ ಆಸಕ್ತಿಯಿಂದ ನಮ್ಮ ಕಾರ್ಯಕ್ರಮಗಳಿಗೆ ಹಾಜರಾಗಿ ಬೆಂಬಲ ನೀಡಿದ್ದಾರೆ. ತಹಶೀಲ್ದಾರರು, ಇ.ಒ.ಗಳು, ಪಿಡಿಒಗಳು...ಹೀಗೆ ಎಲ್ಲ ಸ್ಥರದ ಅಧಿಕಾರಿ ವರ್ಗ ನಮ್ಮ ಜೊತೆ ಕೈಜೋಡಿಸಿ ಅಸ್ಪೃಶ್ಯತೆಯ ನಮ್ಮ ದೀರ್ಘ ಪಯಣದಲ್ಲಿ ಬಲ ತುಂಬಿದ್ದಾರೆ. ರಾಜಕಾರಣಿಗಳನ್ನು ಹೆಚ್ಚು ತೊಡಗಿಸಿಕೊಂಡಿಲ್ಲವಾದರೂ, ಅವರಿಗೂ ಈ ಅಭಿಯಾನದ ಒತ್ತಾಸೆಗಳು ತಿಳಿದಿರಲಿ ಎಂದು ಅಲ್ಲಲ್ಲಿ ಆಹ್ವಾನಿಸಿದ್ದೇವೆ. ಜನಸಾಮಾನ್ಯರು ದಿನದಿಂದ ದಿನಕ್ಕೆ ಹೆಚ್ಚು ಪ್ರೇರೇಪಣೆಗೊಂಡು ನಮ್ಮ ಎಲ್ಲ ಕಾರ್ಯಚಟುಚಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಹೀಗೆ ನಿಮ್ಮೆಲ್ಲರ ಪ್ರೀತಿ ಬೆಂಬಲ ಸಿಗಲೆಂದು ಆಶಿಸುತ್ತೇನೆ. ನಿಮ್ಮ ಅಭಿಪ್ರಾಯಗಳಿಗಾಗಿ ಕಾಯುತ್ತಿರುತ್ತೇವೆ.

# ಅರಿವಿನ ಅಲೆ:

ಅರಿವು ಭಾರತವು ಈ ಪ್ರದೇಶದಲ್ಲಿ ಚಿಂತನೆಯ ಅಲೆಗಳನ್ನು ಸೃಷ್ಟಿಸುತ್ತಿರುವುದು ತೃಪ್ತಿದಾಯಕ ಹಾಗೂ ಭರವಸೆಯ ಸಂಗತಿಯಾಗಿದೆ. ಇದೇ ಸಂಭವಿಸಬೇಕೆಂದು B. R. AMBEDKAR ಅವರು ಆಶಿಸಿದ್ದರು. ಇಲ್ಲಿ ಕೆಲವು ಅಂಶಗಳು ಗಮನಾರ್ಹವಾಗಿವೆ:

1. ಇದು ಒಬ್ಬ ಸಾಮಾನ್ಯ ನಾಗರಿಕರಿಂದ ಆರಂಭಗೊಂಡಿರುವುದು ಗಮನಾರ್ಹ ಸಂಗತಿ; ಯಾವುದೇ ಸಾಮಾಜಿಕ ಸುಧಾರಕ, ರಾಜಕಾರಣಿ, ಗಾಂಧಿವಾದಿ ಅಥವಾ ಸ್ವಾಮೀಜಿಯವರಿಂದ ಅಲ್ಲ.

2. ತನ್ನದೇ ಮನೆಯಲ್ಲಿಯೂ ಸಮುದಾಯದಲ್ಲಿಯೂ ನಡೆದುಬರುತ್ತಿದ್ದ ಕೆಲವು ಆಚರಣೆಗಳ ಬಗ್ಗೆ ಅಪರಾಧಬೋಧೆ ಹೊಂದಿದ ಒಬ್ಬ ಆಧುನಿಕ ವಿದ್ಯಾವಂತ ವ್ಯಕ್ತಿಯ ಮನಸ್ಸಿನ ಸ್ಪಂದನೆಯೇ ಈ ಚಳವಳಿಗೆ ಕಾರಣವಾಗಿದೆ.

3. ಯಾವುದೇ ವಲಯದ ಬೆಂಬಲವಿಲ್ಲದೆ, ಕೇವಲ ತಮ್ಮ ವೈಯಕ್ತಿಕ ಸಂವಹನ ಕೌಶಲ್ಯ ಹಾಗೂ ಪ್ರಾಮಾಣಿಕ ನಿಲುವಿನ ಆಧಾರದ ಮೇಲೆ ಡಾ. ಶಿವಪ್ಪ ಅವರು ನಿಧಾನವಾದರೂ ಮಹತ್ವದ ಹಾದಿಯನ್ನು ನಿರ್ಮಿಸಿಕೊಂಡಿದ್ದಾರೆ.

4. ಅರಿವು ಭಾರತ ಕಾರ್ಯದ ನೇರ ಪರಿಣಾಮವೆಂದರೆ ಸಮಾಜದಲ್ಲಿನ ವಿಭಜನೆ ಮತ್ತು ಸಾಮಾಜಿಕ ಘರ್ಷಣೆಗೆ ಕಾರಣವಾಗಬಹುದಾದ ಅಂಶಗಳನ್ನು ನಿವಾರಿಸುವುದು.




5. ಇದು ಅಳತೆಯಿಲ್ಲದ ಮಹತ್ವದ ಕೊಡುಗೆಯಾಗಿದೆ. ಈ ಪ್ರಯೋಗವು ಸಮಾನತೆ ಮತ್ತು ಸಹೋದರತ್ವವನ್ನು ಉತ್ತೇಜಿಸುವ ಮೂಲಕ ನಾಗರಿಕರ ಸಾಮಾಜಿಕ ಜೀವನದಲ್ಲಿ ಸಮಗ್ರತೆಯನ್ನು ಬೆಳೆಸಲು ನೆರವಾಗುತ್ತಿದೆ.

6. ಜನರು ಅರಿವು ಭಾರತದ ಚಿಂತನೆಗಳು ಮತ್ತು ಪ್ರಯತ್ನಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿರುವುದು ಸಂತೋಷದ ಸಂಗತಿ. ಭಾರತದಲ್ಲಿ ಯಾವುದೇ ಸಾಮಾಜಿಕ ಪರಿವರ್ತನೆಗೆ ಅಡೆತಡೆಗಳನ್ನು ನಿರ್ಮಿಸುವ ದೀರ್ಘ ಇತಿಹಾಸವಿದೆ. ಆದಾಗ್ಯೂ, ಅರಿವು ಭಾರತದ ಈ ಪ್ರಯೋಗ ಯಶಸ್ಸಿನ ದಾರಿಯಲ್ಲಿ ಸಾಗುತ್ತಿದೆ. ಆದರೆ ಮಾನವ ಸಂಪನ್ಮೂಲ ಮತ್ತು ಸಂಚಾರದಂತಹ ನಿರ್ಬಂಧಗಳು ಇನ್ನೂ ಅಸ್ತಿತ್ವದಲ್ಲಿವೆ.

7. ಇತರರೂ ಅರಿವು ಭಾರತದ ಕಾರ್ಯಕ್ರಮವನ್ನು ಮಾದರಿಯಾಗಿ ತೆಗೆದುಕೊಂಡು, ಅದರ ಪ್ರಯತ್ನಗಳಿಂದ ಪಾಠ ಕಲಿಯಲಿ ಎಂಬುದು ನನ್ನ ಹಾರೈಕೆ.




**ವಿ. ಎಸ್. ಎಸ್ ಶಾಸ್ತ್ರಿ**

ಖ್ಯಾತ ವಿಜ್ಞಾನ ಸಂವಹನಕಾರರು, ಕೋಲಾರ

ಮಾನವೀಕರಣ

# ಸಾಮಾನ್ಯ ಮನುಷ್ಯನ ಘನತೆ ಮತ್ತು ದೈವತ್ವ



ಡಾ. ಸಿ. ಎ. ರಮೇಶ್



" ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ "

- ಬಸವಣ್ಣ

ಬಸವಣ್ಣನವರು "ಜಂಗಮಕ್ಕಳಿವಿಲ್ಲ " ಎಂಬ ಮಾತಿನ ಮೂಲಕ ಮತ್ತು "ದೇಹವೇ ದೇಗುಲ" ಎಂಬ ಕಲ್ಪನೆಯ ಮೂಲಕ ಸಾಮಾನ್ಯ ಮನುಷ್ಯನ ಅಸ್ತಿತ್ವಕ್ಕೆ ಅತ್ಯುನ್ನತ ಸ್ಥಾನಮಾನ ನೀಡಿದ್ದಾರೆ. ಇಂದಿನ ಸಮಾಜವೂ ಈ ಸತ್ಯವನ್ನು ಅರಿತುಕೊಳ್ಳಬೇಕಾದ ಅಗತ್ಯವಿದೆ. ಈ ಕುರಿತಾದ ಒಂದೆರಡು ಮಾತು:

ಶ್ರೀಮಂತರು ಅಂದರೆ ಉಳ್ಳವರು ದೇವರ ಹೆಸರಿನಲ್ಲಿ ದೊಡ್ಡ ಕಲ್ಲಿನ ದೇವಾಲಯಗಳನ್ನು ಕಟ್ಟಿಸಬಹುದು, ಆದರೆ ಬಡವರ ಬಳಿ ಆ ಸಂಪತ್ತಿಲ್ಲ. "ನಾನೇನ ಮಾಡಲಿ ಬಡವನಯ್ಯಾ" ಎಂದು ಪ್ರಶ್ನಿಸಿಕೊಳ್ಳುತ್ತಲೇ, ಬಸವಣ್ಣನವರು ತಮ್ಮ "ಸ್ವಂತ ದೇಹವನ್ನೇ ದೇವಸ್ಥಾನವನ್ನಾಗಿ" ಮಾಡಿಕೊಂಡಿದ್ದಾರೆ. ಕಾಲುಗಳನ್ನೇ ಕಂಬಗಳನ್ನಾಗಿ, ದೇಹವನ್ನೇ ಗುಡಿಯನ್ನಾಗಿ ಮತ್ತು ತಲೆಯನ್ನೇ ಚಿನ್ನದ ಕಳಸವನ್ನಾಗಿ ಭಾವಿಸುವ ಮೂಲಕ, ಪ್ರತಿಯೊಬ್ಬ ಸಾಮಾನ್ಯ ಮನುಷ್ಯನ ಅಸ್ತಿತ್ವವನ್ನೂ ದೈವತ್ವದ ಎತ್ತರಕ್ಕೆ ಏರಿಸಿದ್ದಾರೆ.

ಇಂದಿಗೂ ಸಮಾಜದಲ್ಲಿ ಅಸ್ಪೃಶ್ಯತೆಯನ್ನು ಆಚರಿಸುತ್ತಿರುವುದು ಒಂದು ಅಮಾನವೀಯ ಜಡತ್ವವೇ ಸರಿ. ಬಸವಣ್ಣನವರ ಈ ವಚನವು ಸಮಾಜದಲ್ಲಿನ ಇಂತಹ "ಬಾಹ್ಯ ಪ್ರದರ್ಶನ, ಆಡಂಬರ ಮತ್ತು ಜಡತ್ವವನ್ನು ವಿರೋಧಿಸುತ್ತದೆ". ದೇವರು ನೆಲೆಸುವುದು ಕಲ್ಲಿನ ಗುಡಿಗಳಲ್ಲಲ್ಲ , ಬದಲಾಗಿ ಮನುಷ್ಯನ "ಒಳಗಿನ ಅಂತರಂಗ ಶುದ್ಧಿ ಮತ್ತು ಸದಾ ಚಲನಶೀಲವಾಗಿರುವ ಸಮಾಜಮುಖಿ ಚಿಂತನೆಗಳಲ್ಲಿ" ಎಂಬುದನ್ನು ಈ ವಚನ ಬೋಧಿಸುತ್ತದೆ. ಕರುಣೆ ಮತ್ತು ಶುದ್ಧ ಆತ್ಮವನ್ನು ಹೊಂದಿರುವ ಪ್ರತಿಯೊಬ್ಬ ಮನುಷ್ಯನೂ ಪವಿತ್ರನೇ ಎಂಬ ಅರಿವು ಅಸ್ಪೃಶ್ಯತೆಯಂತಹ ಆಚರಣೆಗಳನ್ನು ಬುಡಮಟ್ಟದಿಂದ ಅಲ್ಲಗಳೆಯುತ್ತದೆ. ಬಸವಣ್ಣನವರ ವಚನದಲ್ಲಿ ನೇರವಾಗಿ 'ಅಸ್ಪೃಶ್ಯತೆ' ಪದ ಬಳಕೆಯಾಗದಿದ್ದರೂ, ಜಡತ್ವದ ವಿರೋಧ ಮತ್ತು ಅಂತರಂಗ ಶುದ್ಧಿಯ ಪ್ರತಿಪಾದನೆಯ ಮೂಲಕ ತಾರತಮ್ಯವನ್ನು ಅದು ನಿರಾಕರಿಸುತ್ತದೆ ಎಂಬುದು ಇಲ್ಲಿ ಸ್ಪಷ್ಟ.

ಬಸವಣ್ಣನವರು ಸಾಮಾನ್ಯ ಮನುಷ್ಯನಿಗೆ ನೀಡಿದ ಮಹತ್ವ ನಿಜಕ್ಕೂ ಅಪೂರ್ವವಾದದ್ದು. 'ಜಂಗಮ' ಎಂದರೆ ಕೇವಲ ಒಬ್ಬ ವ್ಯಕ್ತಿಯಲ್ಲ , ಅದು "ನಿರಂತರವಾಗಿ ಚಲಿಸುವ, ಜೀವಂತಿಕೆ ಇರುವ ತತ್ವ" . ಭೌತಿಕವಾದವು ಎಷ್ಟೇ ಭವ್ಯವಾಗಿದ್ದರೂ ಅದು ನಶಿಸಿಹೋಗುತ್ತದೆ ಮತ್ತು ಅದಕ್ಕೆ ಸಾವಿದೆ; ಆದರೆ ಮನುಷ್ಯನೊಳಗಿನ "ಅರಿವು, ಆಚಾರ-ವಿಚಾರಗಳು, ಕರುಣೆ ಮತ್ತು ಸಮಾಜದ ಹಿತವನ್ನು ಬಯಸುವ ಶುದ್ಧ ಆತ್ಮಕ್ಕೆ ಸಾವಿಲ್ಲ" ಎಂದು ಬಸವಣ್ಣನವರು ಸಾವಿರ ವರ್ಷಗಳ ಹಿಂದೆಯೇ ಸಾರಿದ್ದಾರೆ .


ಒಟ್ಟಾರೆಯಾಗಿ, ಕಲ್ಲಿನ ದೇಗುಲಗಳಿಗಿಂತ ಸಾಮಾನ್ಯ ಮನುಷ್ಯನ ಜೀವಂತ ಅಸ್ತಿತ್ವ , ಅರಿವು ಮತ್ತು ಕರುಣೆ ಎಂದೆಂದಿಗೂ ಶಾಶ್ವತ ಎಂದು ಸಾರುವ ಮೂಲಕ ಬಸವಣ್ಣನವರು ಮನುಕುಲದ ಘನತೆಯನ್ನು ಎತ್ತಿಹಿಡಿದಿದ್ದಾರೆ.

ಅಂತರಂಗ

# ಬದುಕಿ ಬಿಡಬೇಕು ತೀವ್ರವಾಗಿ ಸಾಯುವ ಮುನ್ನ



ಎಚ್. ಕೆ. ವಿವೇಕಾನಂದ



ಹೀಗೆ ಬಹಳ ಹಿಂದಿನಿಂದಲೂ ಮತ್ತು ಈಗಲೂ ಸಹ ಅನೇಕ ತತ್ವಜ್ಞಾನಿಗಳು, ಸಾಹಿತಿಗಳು, ಪತ್ರಕರ್ತರು, ವಿರಹಿಗಳು, ಭಾವನಾ ಜೀವಿಗಳು, ಮುಂತಾದವರು ಆಗಾಗ ಹೇಳುತ್ತಲೇ ಇರುತ್ತಾರೆ. ಏಕೆಂದರೆ ಬದುಕಿನ ಮುಂದಿನ ಉಳಿದ ದಿನಗಳು ಎಷ್ಟಿವೆಯೋ ಯಾರಿಗೂ ತಿಳಿದಿಲ್ಲ. ಆ ಉಳಿದ ಸಮಯವನ್ನು ತೀವ್ರವಾಗಿ ಬದುಕಬೇಕೆಂಬ ಉತ್ಕಟ, ಅದಮ್ಯ ಭಾವನೆ ಜಾಗೃತವಾದಾಗ ಈ ರೀತಿಯ ಮಾತುಗಳು ಹೊರಡುತ್ತವೆ......

ಕೊಲ್ಕತ್ತಾಗೆ ಹೋಗಿದ್ದಾಗ ರವೀಂದ್ರನಾಥ್ ಟ್ಯಾಗೋರ್ ಅವರ ಸಮಾಧಿ ಬಳಿ ಹೋಗುವ ದಾರಿಯಲ್ಲಿ ರೈಲು ಕಂಬಿಗಳ ಪಕ್ಕದಲ್ಲಿ ವಾಸಿಸುತ್ತಿದ್ದ ಸಾವಿರಾರು ಕುಟುಂಬಗಳ ಬದುಕನ್ನು ನೋಡಿದಾಗ ಯಾರಿಗಾದರೂ ಹೀಗೆ ಅನಿಸುತ್ತದೆ. ಆ ದೃಶ್ಯಗಳು ಒಂದು ರೀತಿಯಲ್ಲಿ ಮನಕಲಕುವಂತಿದೆ. ದೇಶದ ರಾಜಧಾನಿ ದೆಹಲಿಯಲ್ಲಿ ಸಹ ಈ ರೀತಿಯ ದೃಶ್ಯಗಳು ಕೆಲವು ಕಡೆ ಇದೆ. ಮೋರಿ, ಚರಂಡಿ, ಕೊಳಚೆ ನೀರು ಹರಿಯುವ ಜಾಗದ ಪಕ್ಕ , ಕೆಲವು ಸಿಮೆಂಟ್ ಪೈಪುಗಳ ಒಳಗಡೆ, ಅಲ್ಲೇ ಹುಟ್ಟಿ , ಅಲ್ಲೇ ಬೆಳೆದ ಲಕ್ಷಾಂತರ ಜನ ಬದುಕುತ್ತಿದ್ದಾರೆ.....

ಮುಂಬೈಯ ಅಂಧೇರಿಯ ಕೊಳಗೇರಿ ಭಾರತದಲ್ಲಿ ಅತ್ಯಂತ ಕುಖ್ಯಾತ ಬೃಹತ್ ಕೊಳಗೇರಿ ಎಂದು ಹೆಸರುವಾಸಿಯಾಗಿದೆ. ಬಹುತೇಕ ದೇಶದ ದೊಡ್ಡ ಪಟ್ಟಣಗಳಲ್ಲಿ ಈ ರೀತಿಯ ಕೊಳಗೇರಿಗಳು ಸಾಕಷ್ಟು ಅಸ್ತಿತ್ವದಲ್ಲಿದೆ......

ಅಲ್ಲಿ ವಾಸಿಸುತ್ತಿರುವವರು ಬೇರೆ ಯಾರು ಅಲ್ಲ. ನಮ್ಮದೇ ದೇಶದ ಪ್ರಜೆಗಳು, ನಮ್ಮದೇ ಸಂಬಂಧಿಗಳು, ನಮ್ಮದೇ ಸಮಾಜದ ಸಹೋದರ ಸಹೋದರಿಯರು. ಅಲ್ಲಿ ಒಂದು ಸರಿಯಾದ ಸ್ನಾನಗೃಹ, ಶೌಚಗೃಹ, ಮಲಗುವ ಕೋಣೆ ಇರಲಿ ಕಾಲು ಸಂಪೂರ್ಣ ಚಾಚಿ ಮಲಗುವುದು ಸಹ ಸಾಧ್ಯವಿಲ್ಲದಷ್ಟು ಚಿಕ್ಕ ಪ್ಲಾಸ್ಟಿಕ್ ಗುಡಿಸಲುಗಳು. ಕುಡಿಯುವುದು ಅತ್ಯಂತ ಕಲುಷಿತವಾದ ನೀರು, ಉಸಿರಾಡುವುದು ಅತ್ಯಂತ ಮಲಿನವಾದ ಗಾಳಿ, ಆಹಾರ ಅತ್ಯಂತ ಅನಾರೋಗ್ಯಕರ ಗುಣಮಟ್ಟವನ್ನು ಹೊಂದಿರುತ್ತದೆ. ಆ ಮೂಲಭೂತ ಅವಶ್ಯಕತೆಗಳ ವಿಷಯದಲ್ಲಿ ಅವರಿಗೆ ಆಯ್ಕೆಗಳೇ ಇಲ್ಲ.....

ಇನ್ನು ಬಟ್ಟೆ ಯಾರೋ ದಾನ ನೀಡಿದ್ದು ಆಗಿರಬೇಕು, ಶಾಲೆ ಕಾಲೇಜು ದೂರದ ಮಾತು, ಆರೋಗ್ಯ ತಪಾಸಣಾ ಶಿಬಿರಗಳು ಅಥವಾ ಆಗಾಗ ಒಂದಷ್ಟು ದಾನಿಗಳು ನೀಡುವ ಹಣ್ಣು ಹಂಪಲುಗಳು ಮತ್ತು ಉಳಿದ ಆಹಾರವೇ ಅವರಿಗೆ ಮೃಷ್ಟಾನ್ನ ಭೋಜನ. ಇಂತಹ ಪರಿಸ್ಥಿತಿಯಲ್ಲಿ ಕೋಟ್ಯಂತರ

ಜನ ವಾಸಿಸುತ್ತಿದ್ದಾರೆ. ಮಳೆ, ಗಾಳಿ, ಬಿಸಿಲು, ಚಳಿ ಈ ಎಲ್ಲವನ್ನು ಅದು ಹೇಗೋ ಸಹಿಸಿಕೊಂಡು ಎದುರಿಸಿ ಇನ್ನೂ ಜೀವಂತ ಇದ್ದಾರೆ.....

ಬಹುಶಃ ಕೊರೋನಗಿಂತ ಭೀಕರ ವೈರಸ್ ಗಳು ಸಹ ಇವರ ಆ ಪರಿಸ್ಥಿತಿಯನ್ನು ನೋಡಿ ಸ್ವತಃ ಆ ವೈರಸ್ ಗಳೇ ಆತ್ಮಹತ್ಯೆ ಮಾಡಿಕೊಳ್ಳುತ್ತವೋ ಏನೋ, ಅಷ್ಟೊಂದು ಮಲಿನ ಪರಿಸ್ಥಿತಿಯ ವಾತಾವರಣವಿದೆ......

ಅಲ್ಲಿ ವಾಸಿಸುವ ಜನ ಮೂಲ ನಿವಾಸಿಗಳೋ, ಅಕ್ರಮ ವಲಸಿಗರೋ, ದಾಖಲೆಗಳಿಲ್ಲದ ಮತ್ಯಾರೋ ಏನೇ ಆಗಿರಲಿ ಆದರೆ ಅವರೆಲ್ಲರೂ ಮನುಷ್ಯರೆಂಬುದು ಮಾತ್ರ ಸತ್ಯ ಮತ್ತು ಬದುಕು ಅವರಿಗೆ ಅನಿವಾರ್ಯವಾಗಿದೆ ಎಂಬುದು ಅಷ್ಟೇ ವಾಸ್ತವ. ಯಾರೇ ಆಗಿರಲಿ ಅಲ್ಲಿನ ವಾಸ ಅವರ ಆಯ್ಕೆಯಾಗಿರುವುದು ಸಾಧ್ಯವೇ ಇಲ್ಲ. ಏಕೆಂದರೆ ಆ ಅವಕಾಶವೇ ಅವರಿಗೆ ಇಲ್ಲ........

ಆದ್ದರಿಂದ ಆ ಬಗ್ಗೆ ಹೆಚ್ಚು ಚರ್ಚಿಸುವ ಅಗತ್ಯವಿಲ್ಲ. ಶ್ರೀಮಂತರ ಸರಳತೆಯ ಬಗ್ಗೆ ಸಾಕಷ್ಟು ಮಾತನಾಡುವ ಮಾಧ್ಯಮ, ಸಾಮಾಜಿಕ ಜಾಲತಾಣಗಳು ಮೂಲಭೂತ ಸೌಕರ್ಯಗಳಿಂದಲೇ ವಂಚಿತವಾಗಿರುವ ಇವರ ಬಗ್ಗೆ ದಿವ್ಯ ನಿರ್ಲಕ್ಷ ಅಥವಾ ತಿರಸ್ಕಾರವನ್ನು ಹೊಂದಿದ್ದಾರೆ. ಹಾಗೆಯೇ ಎಲ್ಲಾ ಧರ್ಮದ ಧಾರ್ಮಿಕ ನಾಯಕರುಗಳು ಕರ್ಮ ಸಿದ್ದಾಂತಕ್ಕೆ ಶರಣಾಗಿ ಅದು ಅವರವರ ಕರ್ಮಫಲ ಎಂದು ಇದನ್ನು ಮರೆಮಾಚಲು ಪ್ರಯತ್ನಿಸುತ್ತಾರೆ. ರಾಜಕಾರಣಿಗಳು ಇವರನ್ನು ಚುನಾವಣಾ ರಾಜಕೀಯದ ಭಾಗವಾಗಿ ವೋಟಿನ ಗುಲಾಮರಾಗಿ ಬಳಸಿಕೊಳ್ಳುತ್ತಾರೆ. ಅಧಿಕಾರಿಗಳು ಇವರನ್ನು ತಮ್ಮ ಭ್ರಷ್ಟ ಹಣ ಸಂಪಾದನೆಯ ಮಾರ್ಗಗಳ ರೂಪದಲ್ಲಿ ನೋಡುತ್ತಾರೆ. ಇನ್ನು ಕೆಲವು ಹೋರಾಟಗಾರರು ಒಂದಷ್ಟು ಇವರ ಪರವಾಗಿ ಹೋರಾಡಿ ಹೆಸರು ಗಳಿಸುತ್ತಾರೆ. ಬರಹಗಾರರು ನನ್ನಂತೆ ಬರೆದು ತಮ್ಮ ತೆವಲು ತೀರಿಸಿಕೊಳ್ಳುತ್ತಾರೆ. ಆದರೆ ಅವರ ಬದುಕು ಮಾತ್ರ ಎಷ್ಟೋ ವರ್ಷಗಳಿಂದ ಹೀಗೆಯೇ ಮುಂದುವರಿಯುತ್ತಲೇ ಇದೆ.......

ಈ ನೆಲದ, ಈ ದೇಶದ, ಈ ಸಮಾಜದ ಪ್ರಾಕೃತಿಕ ಸಂಪನ್ಮೂಲಗಳನ್ನು ಸರಿಯಾಗಿ ಹಂಚಿಕೆ ಮಾಡಿದ್ದೇ ಆದರೆ ಈ ಜನರು ಇದಕ್ಕಿಂತ ಉತ್ತಮ ಜೀವನವನ್ನು ನಡೆಸುವಂತ ವಾತಾವರಣ ಸೃಷ್ಟಿಸಬಹುದು. ಕೇವಲ ಒಂದು ಬೃಹತ್ ಸಂಕಲ್ಪ ಮಾತ್ರ ಇದಕ್ಕೆ ಸಾಕಾಗುತ್ತದೆ. ಅಷ್ಟನ್ನೂ ಮಾಡುವ ಸ್ಥಿತಿಯಲ್ಲಿ ನಾವುಗಳು ಇಲ್ಲ.........

ನಾವು ಬದುಕುತ್ತಿರುವ ಮಧ್ಯಮ ವರ್ಗದ ಜೀವನಶೈಲಿಯನ್ನು ಈ ಕೊಳಗೇರಿ ನಿವಾಸದ ಜೀವನ ಶೈಲಿಗೆ ಹೋಲಿಕೆ ಮಾಡಿದಾಗ ಬದುಕಿ

ಬಿಡಬೇಕು ತೀವ್ರವಾಗಿ ಸಾಯುವ ಮುನ್ನ ಎಂಬುದು ಅಕ್ಷರಶಃ ಕಾಡುತ್ತದೆ. ಆ ಪುಟ್ಟ ಪುಟ್ಟ ಮಕ್ಕಳು, ತಾಯಂದಿರು ಭವಿಷ್ಯದ ಯಾವುದೇ ಆಸೆ, ಕನಸು, ಭರವಸೆಗಳಿಲ್ಲದೆ ನಿರ್ಜೀವವಾಗಿ ಜೀವನವನ್ನು ಕಳೆಯುವ ಪರಿಸ್ಥಿತಿ ಊಹಿಸಲಸಾಧ್ಯ......

ಅನಾದಿಕಾಲದಲ್ಲಿ ಕನಿಷ್ಠ ಕಾಡು ಮೇಡುಗಳಲ್ಲಿ , ಬೆಟ್ಟ ಗುಡ್ಡ ಕಣಿವೆಗಳಲ್ಲಿ , ಹೇಗೋ ಹಣ್ಣು , ತರಕಾರಿ, ಸೊಪ್ಪನ್ನು ತಿನ್ನುತ್ತಾ ಬದುಕಬಹುದಾಗಿತ್ತು. ಈಗ ಆ ಅವಕಾಶವೂ ಇಲ್ಲ , ಛೇ......



# ಶಿವರಾತ್ರಿಯ ಶಿವತತ್ವದಲ್ಲಿ ಅರಳಬೇಕಾದ ಸಮಭಾವ



- ಡಾ. ಶಿವಪ್ಪ ಅರಿವು

ಇಂದು ಶಿವರಾತ್ರಿ ಹಬ್ಬ. ಇಡೀ ಭಾರತ ಈ ದಿನವನ್ನು ಒಂದು ಬಗೆಯ ಧ್ಯಾನವನ್ನಾಗಿಸಿದೆ. ನಮ್ಮ ಪುಟ್ಟ ಹಳ್ಳಿಯಿಂದ ಪ್ರಮುಖ ಶಿವಕೇಂದ್ರಗಳಲ್ಲಿ ಒಂದಾದ ಕಾಶಿಯವರೆಗೆ ಬಗೆಬಗೆಯ ಜನಸಮುದಾಯಗಳು ಉಪವಾಸ, ಅರೆ ಉಪವಾಸ ಮಾಡುತ್ತಾ ಮಹಾಯೋಗಿ ಶಿವನನ್ನು ನೆನಪಿಸಿಕೊಳ್ಳುವ ದಿನ. ಶಿವನು ಚಾರಿತ್ರಿಕ ವ್ಯಕ್ತಿಯೊ ಅಲ್ಲವೊ ಮುಖ್ಯವಲ್ಲ. ಜನ ನಂಬಿ ಆರಾಧಿಸುವ ಶಿವ ನಮ್ಮ ಆಧ್ಯಾತ್ಮ ಜಗತ್ತಿನ ಒಂದು ವಿಸ್ಮಯ.

ಸಿನೆಮಾಗಳು, ನಂತರ ಟಿ. ವಿ., ದಾಳಿ ಮಾಡುವ ಮೊದಲು ಶಿವರಾತ್ರಿಯಂದು ಶಿವಕತೆ, ಹರಿಕತೆ, ಭಜನೆ, ಜಾನಪದ ನೃತ್ಯಗಳನ್ನು ಏರ್ಪಡಿಸಿ ಜಾಗರಣೆ ಮಾಡುವ ಪರಿಪಾಠವಿತ್ತು. ಧಾರ್ಮಿಕ-ಆಧ್ಯಾತ್ಮಿಕ ಸಂಗತಿಗಳು ಸಮ್ಮಿಶ್ರಣಗೊಂಡು ಕಿವಿ-ಕಣ್ಣಿಗೆ ಬೀಳುತ್ತಿದ್ದವು. ಬದುಕಿನ ಕಷ್ಟಗಳ ನಡುವೆಯೂ ಆಧ್ಯಾತ್ಮಕ್ಕೆ ಮುಖಾಮುಖಿಯಾಗಲು ಅವಕಾಶ ಸಿಗುತ್ತಿತ್ತು. ಊರಿನ (ಕೆಲವೊಮ್ಮೆ ಪಕ್ಕದೂರಿನ) ದೇವಾಲಯಗಳನ್ನು ಶ್ರದ್ಧೆಯಿಂದ ಸ್ವಚ್ಛಗೊಳಿಸಿ, ಅಲಂಕರಿಸಿ ಇಡೀ ರಾತ್ರಿ ಶಿವತತ್ವವನ್ನು ನೆನಪಿಸಿಕೊಂಡು ಜಾಗರಣೆ ಮಾಡಲಾಗುತ್ತಿತ್ತು.

ಸಿನೆಮಾ ಮತ್ತು ಟಿ. ವಿ. ಭರಾಟೆ ಶುರುವಾದ ಮೇಲೆ ಲಾಭಕ್ಕಿಂದ ನಷ್ಟವೇ ಹೆಚ್ಚಾಯಿತು. ಮೊಬೈಲ್ ಕೈಸೇರಿದ ಮೇಲಂತೂ ಜನರ ಸಮಯವೆಲ್ಲ ಸೋರಿ ಹೋಗುತ್ತಿದೆ.

ಈಗ ಎಲ್ಲರೂ ಪೋನಿನಲ್ಲಿ ಕಾರ್ಯನಿರತರು. ಶಿವರಾತ್ರಿಯೂ ಫೋನ್-ರಾತ್ರಿಯಾಗಿದೆ. ಈ ದಿನದಂದು ಗಿಟ್ಟಿಸಿಕೊಳ್ಳಬಹುದಾದ ಆಧ್ಯಾತ್ಮಿಕ ಪ್ರಭಾವವನ್ನು ಫೋನ್ ನಲ್ಲಿ ತೂರಿಬರುವ ರಂಜಕಕ್ಕೆ ಜನ ಮರುಳಾಗುತ್ತಿದ್ದಾರೆ. ಸಹಜ ಆರೋಗ್ಯವನ್ನೂ ಕಳೆದುಕೊಳ್ಳುವ ದುಸ್ಥಿತಿ ಒದಗಿಬಂದಿದೆ.

ಶಿವನನ್ನು ಒಂದು ತತ್ವವಾಗಿ ಈ ನೆಲದ ಹಿರಿಯರು ಸ್ವೀಕರಿಸಿದ್ದಾರೆ. ಹಾಗಾಗಿಯೇ ಹಿಮಾಲಯದಿಂದ ಕನ್ಯಾಕುಮಾರಿವರೆಗೆ; ನಿಗೂಢರಾಗಿ ವರ್ಷಗಳೇ ಕಳೆಯುವ ತಪಸ್ವಿಗಳಿಂದ ಹುಣ್ಣಿಮೆಗೊ, ಶಿವರಾತ್ರಿಗೋ ನೆನಪುಮಾಡಿಕೊಳ್ಳುವ ಜನಸಾಮಾನ್ಯರವರೆಗೆ ಶಿವತತ್ವ ವ್ಯಾಪಿಸಿದೆ. ಶಿವ ಸಿಂಧು ಬಯಲು ನಾಗರೀಕತೆಯ ಕಾಲದಿಂದಲೂ ಆರಾಧನೆಗೊಂಡ ಪಶುಪತಿ, ಹಿರಿಕನಾಗಿದ್ದಾರೆ.

ಶಿವ ರೂಪವೂ ಹೌದು ರೂಪಾತೀತವೂ ಹೌದು. ಹಾಗಾಗಿಯೇ ಆತನನ್ನು ಆತ ಎನ್ನುವುದೂ ತಪ್ಪಾಗಿಬಿಡಬಹುದು. ಆತ ಆಕೆಯೂ ಆಗಿರುವುದರಿಂದ ಅರ್ಧನಾರೀಶ್ವರ. ಇವನಲ್ಲಿ ಗಂಡು ಅಹಮಿಕೆಗೆ ಜಾಗವಿಲ್ಲ. ಅರ್ಧ ಸ್ತ್ರೀ, ಅರ್ಧ ಪುರುಷ. ಯಾವ ಸ್ಥಳ ಭಯ ಹುಟ್ಟಿಸುತ್ತದೊ ಅದು ಆತನಿಗೆ ಇಷ್ಟವಾಗುವ ಜಾಗ. ಯಾವ ಆಹಾರ ನಿಷೇಧಿಸಲಾಗುತ್ತದೆಯೋ ಅದು ಆತನ ಅನೇಕ ಅನುಯಾಯಿಗಳ ಆಹಾರ. ಯಾವುದು ಶಿಷ್ಟಾಚಾರವೊ ಅದರ ಉಲ್ಲಂಘನೆ ಮಾಡಿದ ಮಹಾಗುರುವಾಗಿಯೂ ಶಿವ ನಮ್ಮ ಮುಂದಿದ್ದಾರೆ. ಶಿವನಿಗೆ ಕಟ್ಟುಪಾಡುಗಳಿಲ್ಲ ಎನ್ನುವುದನ್ನು ಆತನ ಭಿನ್ನಭಿನ್ನ ಶಿಷ್ಯವರ್ಗದಿಂದ ಸಾಬೀತಾಗುತ್ತದೆ. ಸ್ಮಶಾನವಾಸ, ಹೆಣಗಳನ್ನು ಸುಟ್ಟ ಬೂದಿಯನ್ನು ಬಳಿದುಕೊಳ್ಳುವುದು, ಮಾಂಸ ತಿನ್ನುವ ಹಾವನ್ನು ಕೊರಳಿಗಾಕಿಕೊಳ್ಳುವುದು..... ನೀವು ಯಾವುದನ್ನು ಬೇಡ ಎನ್ನುವಿರೊ ಅದನ್ನು ಶಿವ ಇಷ್ಟಪಡಬಹುದು. ನೀವು ಯಾವುದನ್ನು ಇಷ್ಟಪಡುವಿರೊ ಅದನ್ನು ಶಿವ ತಿರಸ್ಕರಿಸಬಹುದು. ಹಾಗಾಗಿಯೇ ಶಿವ ಅನೇಕ ವಿಷಯಗಳಲ್ಲಿ ಅತೀತ. ಕ್ರಮ ತಪ್ಪುವ, ಎಲ್ಲೆ ಮೀರುವ ವಿಸ್ಮಯ ಶಕ್ತಿ. ಶಿವ ಪರಂಪರೆ ವಿಸ್ಮಯಕಾರಿಯಾದುದು.



ಶಿವಾಲಯಗಳಲ್ಲಿ ಶಿಶ್ನ-ಯೋನಿಗಳ ಪೂಜೆ ನಡೆಯಬೇಕಿರುವುದೂ ಹೆಣ್ಣುಗಂಡುಗಳ ಸಮಭಾವದಲ್ಲಿಯೇ. ಮಿಲನವನ್ನೂ ಪೂಜ್ಯನೀಯಗೊಳಿಸಿರುವುದು ಬೇರಗಲ್ಲ ಅದು ಸಾಮಾನ್ಯ ಸತ್ಯವೆಂಬುದರ ಪ್ರತಿಪಾದನೆ. ಮುಂದುವರೆಕೆಗೆ ಜಗತ್ತಿನ ಎಲ್ಲ ಜೀವಿಗಳಲ್ಲೂ ನಡೆಯಲೇಬೇಕಾದ ದೊಡ್ಡಕ್ರಿಯೆ.

ಶಿವರಾತ್ರಿ ಆಚರಣೆಯ ಸಂಭ್ರಮದಲ್ಲಿ ನೇರವಾಗಿ, ಭಾಗಿಯಾಗುವ ಜನ ಹಲವರು- ಬ್ರಾಹ್ಮಣರಿಂದ ಶೂದ್ರರವರೆಗೆ. ಅತಿ ಶೂದ್ರರಾದ ಪಂಚಮರು ಅಥವ ಅಸ್ಪೃಶ್ಯರು ಕೂಡ ಭಾಗಿಯಾಗುತ್ತಾರೆ. ಆದರೆ ಅವರ ಸ್ಥಿತಿ, ಸ್ಥಾನ ಸರಿಸಮವಾದುದಲ್ಲ. ಅವರ ಸ್ಥಾನಮಾನ ಅವಮಾನಕರ. ಅದರಲ್ಲೂ ಹಳ್ಳಿಗಳಲ್ಲಿ, ಹೆಜ್ಜೆಹೆಜ್ಜೆಗೂ ತಾರತಮ್ಯ ಕಾಣುತ್ತದೆ. ಅವರು ಕೆಳಗಿನವರಾಗಿಯೇ, ಹೊರಗಿನವರಾಗಿಯೇ ಉಳಿಯುವುದು ಮಾತ್ರ ತುಂಬಾ ತುಂಬಾ ನೋವಿನ ವಿಚಾರ. ಶಿವತತ್ವವಾಗಲಿ, ಆತನ ಸ್ವರೂಪವಾಗಲಿ ದಲಿತ ವಿರೋಧಿಯಾಗಲು ಸಾಧ್ಯವೇ ಇಲ್ಲ. ನಿಜಾ ಹೇಳವುದಾದರೆ, ದಲಿತರೇ ಶಿವನಿಗೆ ಅತಿ ಹತ್ತಿರದವರು. ಯಾವ ಆಯಾಮದಲ್ಲಿ ನೋಡಿದರೂ ಶಿವನು ದಲಿತರಿಗೆ ದೂರದವನಲ್ಲ. ದುರಂತವೇನೆಂದರೆ ಮೇಲ್ವರ್ಗದವರು ಶಿವನನ್ನು ತಮ್ಮವನನ್ನಾಗಿಸಿಕೊಳ್ಳಲು, ಶಿವತತ್ವಕ್ಕೆ

ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಶಿವನನ್ನೂ ಚೌಕಟ್ಟಿಗೆ ಒಳಪಡಿಸಿದ್ದಾರೆ. ಆತನ ಹೆಸರಿನಲ್ಲಿ ಕಟ್ಟಿರುವ ಗುಡಿಗಳಿಗೆ ಅಸ್ಪೃಶ್ಯತೆಯನ್ನು ಅಂಟಿಸಿಬಿಟ್ಟಿದ್ದಾರೆ.

ಶಿವ ಎತ್ತರಕ್ಕೆ ಏರಿದ ದೈವ ಅನ್ನುವುದಕ್ಕಿಂತ, ಎತ್ತರದಿಂದ ಇಳಿದು ಸಾಮಾನ್ಯ ಜೀವಿಗಳ ಜೈವಿಕಶಕ್ತಿಯಾದ ಎನ್ನುವುದು ಸರಿ. ಹಾಗಾಗಿಯೇ ಶಿವ ಸರ್ವರಲ್ಲೂ ಮಾನ್ಯವಾಗಿರುವ ದೈವ, ಗುರು, ಸಹಪಯಣಿಗ.

ಭಾರತದಲ್ಲಿ ಮೇಲ್ಜಾತಿಯವರೇ ಮೇಲ್ವರ್ಗದವರಾಗಿದ್ದು ಅಸ್ಪೃಶ್ಯತೆಯಂಥ ಚಾರಿತ್ರಿಕ ಅಪರಾಧಗಳನ್ನು ತಿದ್ದುಕೊಳ್ಳಲು ಇದು ಸಕಾಲ. ನಾಲ್ಕು ಮೆಟ್ಟಿಲು ಇಳಿದು ಅತಿಶೂದ್ರರೊಂದಿಗೆ ಸಮವಾಗಿ ನಿಲ್ಲುವುದನ್ನು ರೂಢಿಸಿಕೊಳ್ಳಬೇಕು. ಇದರಿಂದ ಸಮಾಜದಲ್ಲಿ ಪ್ರೀತಿ, ಶಾಂತಿ, ನ್ಯಾಯಗಳು ಮರುಸ್ಥಾಪನೆಗೊಳ್ಳುತ್ತವೆ. ಶಿವರಾತ್ರಿಯ ಉಪವಾಸವು ಜಾತಿ ಮತ್ತು ಲಿಂಗ ಅಹಂಕಾರಗಳನ್ನು ಕರಗಿಸಲಿ. ಇಲ್ಲಿ ಯಾರೂ ದೊಡ್ಡವರಲ್ಲ , ಸಣ್ಣವರೂ ಅಲ್ಲ. ನಾವೆಲ್ಲ ಈ ನೆಲದ ಮೇಲೆ ಒಂದಿಷ್ಟು ಕಾಲ ಓಡಾಡಿಕೊಂಡು ಹೋಗಲು ಬಂದವರಾಗಿದ್ದೇವೆ. ಜಾತಿಯ ಕಾರಣಕ್ಕೊ , ಧರ್ಮದ ಕಾರಣಕ್ಕೊ ತಾರತಮ್ಯ ಮಾಡುವುದನ್ನು ನಿಲ್ಲಿಸೋಣ. ನಮಗೆ ಯಾರಿಗಾದರೂ 'ಮೇಲಿನವರು' ಎಂಬ ಪಟ್ಟ ಸಿಕ್ಕಿದ್ದರೆ ಅದು ಒಂದು ಬಗೆಯ 'ಅಸಹ್ಯ'ವೆಂದು ತಕ್ಷಣವೇ ಬಿಟ್ಟುಬಿಡೋಣ. ಶಿವನಿಂದ ಮೊದಲುಗೊಂಡು ಬುದ್ಧ , ಮಹಾವೀರ, ಬಸವ, ವಿವೇಕಾನಂದ, ಗಾಂಧಿ... ಇಲ್ಲಿಯವರೆಗೆ ಎಲ್ಲ ಮಹನೀಯರು ಇದ್ದ ಸ್ಥಾನವನ್ನು ಬಿಟ್ಟುಕೊಟ್ಟೇ ದೊಡ್ಡವರಾಗಿದ್ದಾರೆ.

ಕೊನೆಯದಾಗಿ, ಕೆಲವರು ಶತಮಾನಗಳ ಆಚರಣೆಗಳನ್ನು , ಹಬ್ಬಗಳನ್ನು ಹೀಗೆಳೆಯುತ್ತಾರೆ. ಅವನ್ನು ಸಣ್ಣದು ಮಾಡಿ ಮಾತನಾಡುವುದರಿಂದ ಲಾಭವೇನೂ ಆಗುವುದಿಲ್ಲ. ಈ ಬಗೆಯ ಹಬ್ಬ ಅಥವಾ ಆಚರಣೆಗಳಲ್ಲಿ ಸೇರಿಕೊಂಡಿರಬಹುದಾದ ಅನ್ಯಾಯದ, ತಾರತಮ್ಯದ ಅಂಶಗಳನ್ನು ತಗೆದು ಅವನ್ನು ಮತ್ತಷ್ಟು ಸುಂದರ ಮತ್ತು ಮಾನವೀಯಗೊಳಿಸಲು ಸಾಧ್ಯವಿದೆ. ಆ ಬಗ್ಗೆ ಗಮನ ಕೊಡೋಣ.

ಅರಿವು ಭಾರತ

# ಇತ್ತೀಚಿನ ಕಾರ್ಯಕ್ರಮಗಳು






# ಘಟ್ಟಕಾಮದೇನಹಳ್ಳಿಯ ಪ್ರೌಢಶಾಲೆಯಲ್ಲಿ
# **ಮಕ್ಕಳಿಗೆ ಸಮಸಮಾಜದ ಪ್ರತಿಜ್ಞೆ**

04 February 2026

# ಜೀವನ ಪಾಠಗಳು

ಸೋಮಯಾಜಲಹಳ್ಳಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಸಲೀಮ್ ಅವರು ಮಾನವೀಯ ವಿಚಾರಗಳನ್ನು ಪ್ರಸ್ತಾಪಿಸಿ ಸಮ ಸಮಾಜದ ಪ್ರತಿಜ್ಞೆ ಮಾಡಿಸಿದರು.




## ಪ್ರತಿಜ್ಞೆ

“ಈ ದೇಶದ ಜವಾಬ್ದಾರಿಯುತ ನಾಗರೀಕನಾದ/ಳಾದ ನಾನು, ಅಸ್ಪೃಶ್ಯ ಆಚರಣೆಗಳನ್ನು ನಿರ್ಬಂಧಿಸುವ ಕಾನೂನುಗಳನ್ನು ಗೌರವಿಸುತ್ತೇನೆ. ಅಮಾನವೀಯ ಮತ್ತು ಕಾನೂನು ಬಾಹಿರ ಅಸ್ಪೃಶ್ಯ ಆಚರಣೆಗಳನ್ನು ತಿರಸ್ಕರಿಸುತ್ತೇನೆ. ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕು ಎಲ್ಲರಿಗೂ ಇದೆ ಎಂದು ಒಪ್ಪಿ ಇತರರಿಗೂ ತಿಳಿಸುತ್ತೇನೆ. ಮನೆ, ದೇವಾಲಯ ಹಾಗೂ ಇತರೆ ಸಾರ್ವಜನಿಕ ಸ್ಥಳಗಳ ಪ್ರವೇಶದಲ್ಲಿ ಎಲ್ಲ ಜಾತಿಯ ಜನರನ್ನು ಸಮಾನವಾಗಿ ಕಾಣುತ್ತೇನೆ. ಎಲ್ಲ ಬಗೆಯ ಅಸ್ಪೃಶ್ಯ ಆಚರಣೆಗಳ ಬಗ್ಗೆ ಇತರರಿಗೂ ತಿಳುವಳಿಕೆ ನೀಡಿ ಭಾರತವನ್ನು ಅಸ್ಪೃಶ್ಯತೆ ಮುಕ್ತ ರಾಷ್ಟ್ರವನ್ನಾಗಿ ಮಾಡಲು ಈ ಮೂಲಕ ಪ್ರತಿಜ್ಞೆ ಮಾಡುತ್ತಿದ್ದೇನೆ.”



05 February 2026

# ಹಳ್ಳಿಯಲ್ಲಿ ಅರಿವಿನ ಯಾನ:

## ಮುಳಬಾಗಿಲು ವೀರಸಂದ್ರ ಅಗ್ರಹಾರದ ಜಯಸಿಂಹ ಅವರ ಮನೆಯಲ್ಲಿ ಸಮಾನತೆಗಾಗಿ ಸಹಭೋಜನ ಮತ್ತು ಸಾಮರಸ್ಯ ಮಾತು








BEYOND BARRIERS

# ARIVU BHARAT

A Movement of Awareness, Equality and Social Change










12.4.2026 ರಂದು ಕೋಲಾರದ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ **ಅರಿವು ಭಾರತಕ್ಕೆ 12 ವರ್ಷ ತುಂಬಿದ ನೆನಪಿನಲ್ಲಿ ಕೃತಿ ಬಿಡುಗಡೆ** ಮತ್ತು **ಅವಲೋಕನ ಕಾರ್ಯಕ್ರಮ** ಏರ್ಪಡಿಸಲಾಗಿತ್ತು.

# ಉಪ ಜಾತಿಗಳಿಂದಲೇ ತಾರತಮ್ಯದ ಜಗಳ

## ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಅಭಿಪ್ರಾಯ | ಗ್ರಾಮರತ್ನ ಪುರಸ್ಕೃತರಿಗೆ ಸನ್ಮಾನ

■ ವಿಜಯವಾಣಿ ಸುದ್ದಿಜಾಲ ಕೋಲಾರ

ಒಂದೇ ಜಾತಿಯೊಳಗೆ ನೂರೆಂಟು ಉಪ ಜಾತಿ ಪಟ್ಟ ಕಟ್ಟಿಕೊಂಡು ಮೇಲು ಕೀಳೆಂದು ಜಗಳವಾಡುತ್ತಿದ್ದೇವೆ. ಇನ್ನು ನಾವು ಯಾವ ಸಮಾಜ ಕಟ್ಟಲು ಸಾಧ್ಯ?, ಉಪ ಜಾತಿಗಳ ನಡುವೆ ಪರಸ್ಪರ ವಿವಾಹಗಳು ನಡೆದಾಗ ಬದಲಾವಣೆ ಕಾಣಬಹುದು ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ತಿಳಿಸಿದರು.

ನಗರದ ಅರಿವು ಭಾರತ ಸಂಸ್ಥೆ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಅಸ್ಪೃಶ್ಯತೆ ನಿರ್ಮೂಲನೆಯಲ್ಲಿ 12 ವರ್ಷ ಒಂದು ಅವಲೋಕನ ಕಾರ್ಯಕ್ರಮದಲ್ಲಿ ಬಿಯಾಂಡ್ ಬ್ಯಾರಿಯರ್ಸ್ ಕೃತಿ ಬಿಡುಗಡೆಗೊಳಿಸಿ ಮಾತನಾಡಿ, ಸಾಮಾಜಿಕ ಪಿಡುಗುಗಳನ್ನು ನಿರ್ಮೂಲನೆ ಮಾಡುವ ಕಾರ್ಯಕ್ಕೆ ಮೊದಲು ವಿರೋಧ ಬರುವುದೇ ಮನೆಯಿಂದ. ಹೀಗಾಗಿ ಮೊದಲು ಮನೆಯಲ್ಲಿ ಅರಿವು ಮೂಡಿಸಬೇಕು. ಇಲ್ಲದಿದ್ದರೆ ಶತಮಾನ ಕಳೆದರೂ ಬದಲಾವಣೆ ಅಸಾಧ್ಯ ಎಂದರು.

ಬದುಕುವ ರೂಪದಲ್ಲಿ, ನುಡಿಯುವ ಪದದಲ್ಲಿ ಬುದ್ಧನ ತತ್ವ ಪಾಲಿಸುವುದಾದರೆ ನಾವೂ ಬುದ್ಧರಾಗಬಹುದು. ಕೇವಲ ನನ್ನ ಧರ್ಮವನ್ನು ಬದಲಾಯಿಸಿದ ಮಾತ್ರಕ್ಕೆ ನಾನು ಬುದ್ಧ ಆಗಲು ಸಾಧ್ಯವಿಲ್ಲ. ಸುಲಭವಾಗಿ ಬೌದ್ಧನಾಗಬಹುದು ಆದರೆ ಬುದ್ಧನಾಗುವುದು ಹೇಗೆ? ಅರಿವು, ಪ್ರಜ್ಞೆ, ಜ್ಞಾನ, ತಿಳುವಳಿಕೆ ಬಂದರೆ ಮಾತ್ರ ಬುದ್ಧನಾಗಲು ಸಾಧ್ಯ ಎಂದರು.

ಅರಿವು ಭಾರತ ಒಂದು ತಂಡವಾಗಿ ಕೆಲಸ ಮಾಡಬೇಕು.



ಕೋಲಾರ ನಗರದ ಹೊರವಲಯದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಅಸ್ಪೃಶ್ಯತೆ ನಿರ್ಮೂಲನೆಯಲ್ಲಿ 12 ವರ್ಷ ಒಂದು ಅವಲೋಕನ ಕಾರ್ಯಕ್ರಮದಲ್ಲಿ ಬಿಯಾಂಡ್ ಬ್ಯಾರಿಯರ್ಸ್ ಕೃತಿಯನ್ನು ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಬಿಡುಗಡೆಗೊಳಿಸಿದರು. ಅರಿವು ಶಿವಪ್ಪ, ಬಿ.ಗೋಪಾಲ್, ಮುಕುಂದರಾಜ್ ಇದ್ದರು.

ಕಾರ್ಯಕ್ರಮ ನಡೆಸಿದ ಬಳಿಕ ಆ ಗ್ರಾಮದಲ್ಲಿನ ಪರಿಣಾಮ ಅಧ್ಯಯನ ಮಾಡಬೇಕು. ಈವರೆಗೆ ಯಾವುದೇ ಗ್ರಾಮ ಅಸ್ಪೃಶ್ಯತೆ ಮುಕ್ತ ಎಂದು ಘೋಷಣೆ ಮಾಡಿಕೊಂಡಿಲ್ಲ. ಒಂದು ಗ್ರಾಮದಲ್ಲಿನ ಒಂದು ಮನೆ ಸರಿ ಹೋದರೆ ಸಾಲದು. ಉಳಿದ ಮನೆಗಳು ಕೂಡ ಸರಿಹೋಗಬೇಕು. ಪ್ರತಿ ಗ್ರಾಮರತ್ನರು ಎಲ್ಲ ಮನೆಗಳಿಗೆ ಹೋಗಿ ಅರಿವು ಮೂಡಿಸಿ ಅಸ್ಪೃಶ್ಯತೆ ಮುಕ್ತ ಗ್ರಾಮ ಎಂದು ಘೋಷಿಸಬೇಕು. ಗ್ರಾಮರತ್ನಗಳನ್ನು ಕೋಲಾರ ರತ್ನಗಳನ್ನಾಗಿ ಮಾಡಬೇಕು. ಅವು ಮುಂದೆ ಕರ್ನಾಟಕ ರತ್ನ, ಭಾರತ ರತ್ನಗಳಾಗಬೇಕು. ಮುಂದಿನ 50 ವರ್ಷಗಳ ಮುನ್ನೋಟ ಇರಬೇಕು. ಸಮಾಜ ಹೇಗಿರಬೇಕು ಎಂಬ ಕನಸು ಕಾಣಬೇಕು ಎಂದು ಸಲಹೆ ನೀಡಿದರು.

### ಜಾತಿಮುಕ್ತ ಸಮಾಜ ನಿರ್ಮಾಣವಾಗಲಿ

ಬೆಂಗಳೂರಿನ ಪ್ರಜಾ ಪರಿವರ್ತನಾ ಸಂಘಟನೆಯ ಅಧ್ಯಕ್ಷ ಬಿ.ಗೋಪಾಲ್ ಮಾತನಾಡಿ, ಅಸ್ಪೃಶ್ಯತೆ ಒಂದು ಮಾರಕ ರೋಗ. ಅರಿವು ಭಾರತದ ಕಾರ್ಯಕ್ರಮ ನಿರಂತರವಾಗಿ ನಡೆಯಬೇಕು. ಇದು ಮತ್ತಷ್ಟು ಹರಡಬೇಕು. ಅಸ್ಪೃಶ್ಯತೆ ಮುಕ್ತ, ಜಾತಿಮುಕ್ತ ಸಮಾಜ ನಿರ್ಮಾಣ ನಮ್ಮೆಲ್ಲರ ಕನಸು ಆಗಬೇಕು ಎಂದು ಹೇಳಿದರು.

ಅರಿವು ಭಾರತ ಸಂಸ್ಥೆಯ ಅರಿವು ಶಿವಪ್ಪ ಮಾತನಾಡಿ, ಅರಿವು ಭಾರತದ 12 ವರ್ಷಗಳ ಮೈಲಿಗಲ್ಲು ನೆನಪಿಸಿಕೊಳ್ಳುವ ಕಾರ್ಯಕ್ರಮವಾಗಿದೆ. ಕರ್ನಾಟಕವಲ್ಲದೇ ಆಂಧ್ರ, ತಮಿಳುನಾಡಿನಲ್ಲೂ ಸಮತೆಯ ಟೀ ಕಾರ್ಯಕ್ರಮ ನಡೆಸಿದ್ದೇವೆ. 400ಕ್ಕೂ ಅಧಿಕ ಹಳ್ಳಿಗಳಲ್ಲಿ ಗೃಹ ಪ್ರವೇಶ ಕಾರ್ಯಕ್ರಮ ರೂಪಿಸಿದ್ದೇವೆ. ದೇವಸ್ಥಾನ ಪ್ರವೇಶ ಕಾರ್ಯಕ್ರಮ, ಪ್ರತಿಜ್ಞಾವಿಧಿ ನಡೆಸಿದ್ದೇವೆ. 1,300ಕ್ಕೂ ಅಧಿಕ ದೇಗುಲಗಳ ಮುಂದೆ ಮುಕ್ತ ಪ್ರವೇಶದ ಫಲಕ ಹಾಕಿಸಿದೆವು. ಇದಕ್ಕೆ ಜಿಲ್ಲಾಧಿಕಾರಿ ಎಂ.ಆರ್.ರವಿ ನೀಡಿದ ಸಹಾಯ ಕಾರಣ. ಪ್ರತಿ ಹಂತದಲ್ಲಿ ಜತೆಯಾಗಿ, ಬೆನ್ನೆಲುಬಾಗಿ ನಿಂತಿದ್ದಾರೆ ಎಂದರು. ಕರ್ನಾಟಕ ಸಾಹಿತ್ಯ ಪರಿಷತ್ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಮಾತನಾಡಿ, ದಲಿತರಲ್ಲಿ ಬಹಳ ಪ್ರತಿಭೆ ಇದೆ. ಸಾಹಿತ್ಯ, ರಂಗಭೂಮಿ, ಜನಪದ, ಸಂಗೀತ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಪ್ರತಿಭಾವಂತರ ಇದ್ದಾರೆ. ಇದನ್ನು ಕಂಡು ಕೆಲವರಿಗೆ ತಡೆಯಲಾಗದೆ ಸಾವಿರಾರು ವರ್ಷಗಳಿಂದ ಅಸ್ಪೃಶ್ಯತೆ ಆಚರಿಸಿಕೊಂಡು ಬರುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಗ್ರಾಮರತ್ನ ಪುರಸ್ಕೃತರನ್ನು ಸನ್ಮಾನಿಸಲಾಯಿತು.

ಭೀಮಸೇನೆ ರಾಜ್ಯ ಅಧ್ಯಕ್ಷ ಪಂಡಿತ್ ಮುನಿವೆಂಕಟಪ್ಪ, ದಲಿತ ಮುಖಂಡ ಟಿ.ವಿಜಯಕುಮಾರ್, ಜನವಾದಿ ಮಹಿಳಾ ಸಂಘಟನೆಯ ವಿ.ಗೀತಾ, ಕಸಾಪ ಜಿಲ್ಲಾಧ್ಯಕ್ಷ ಎನ್.ಬಿ.ಗೋಪಾಲಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಎನ್.ವಿಜಯಲಕ್ಷ್ಮಿ ಇದ್ದರು.

# ಜಾತಿ ಹೆಸರಲ್ಲಿ ನಿಂದನೆ ಅಮಾನುಷ ಕೃತ್ಯ

## 'ಅರಿವು ಭಾರತ' ನಿಂತ ನೀರಾಗಬಾರದು; 'ಹರಿಯುವ ಭಾರತ' ಆಗಲಿ: ಜಿಲ್ಲಾಧಿಕಾರಿ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಜಾತಿ ಹೆಸರಲ್ಲಿ ನಿಂದನೆ, ಅಪಮಾನ ಬೇಡ
- ಅರಿವು ಸಂಸ್ಥೆಯಿಂದ 'ಬಿಯಾಂಡ್ ಬ್ಯಾರಿಯರ್ಸ್' ಕೃತಿ ಬಿಡುಗಡೆ
- ಅಸ್ಪೃಶ್ಯತೆ ನಿರ್ಮೂಲನೆಯಲ್ಲಿ 12 ವರ್ಷ– ಒಂದು ಅವಲೋಕನ

ಕೋಲಾರ: ಸಮಾಜದಲ್ಲಿ ಟೀಕೆಗಳಿಗೆ ಯಾರೂ ಹೊರತಲ್ಲ, ಸಾರ್ವಜನಿಕ ಜೀವನದಲ್ಲಿ ನಿಂದಕರು ಇರಲೇಬೇಕು. ನಿಂದನೆಗೆ, ಅಪಮಾನಕ್ಕೆ ಒಳಗಾದಾಗ ಮಾತ್ರ ಸನ್ಮಾನಕ್ಕೆ ಅರ್ಥಬರುತ್ತದೆ. ಆದರೆ ಜಾತಿಯ ಹೆಸರಲ್ಲಿ ನಿಂದನೆ, ದೌರ್ಜನ್ಯ, ಅಪಮಾನ ನಡೆಯಬಾರದು. ಕೇವಲ ಜಾತಿ ಕಾರಣಕ್ಕಾಗಿ ಒಬ್ಬ ವ್ಯಕ್ತಿಯನ್ನು ಅವಹೇಳನ ಮಾಡುವುದು, ನಿಕೃಷ್ಟವಾಗಿ ಕಾಣುವುದು ಅತ್ಯಂತ ಅಮಾನುಷ ಕೃತ್ಯ ಹಾಗೂ ಸಂವಿಧಾನ ವಿರೋಧಿ ನಡೆ ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ ಅಭಿಪ್ರಾಯಪಟ್ಟರು.

ಅರಿವು ಭಾರತ ಸಂಸ್ಥೆ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಅಸ್ಪೃಶ್ಯತೆ ನಿರ್ಮೂಲನೆಯಲ್ಲಿ 12 ವರ್ಷ– ಒಂದು ಅವಲೋಕನ' ಕಾರ್ಯಕ್ರಮದಲ್ಲಿ 'ಬಿಯಾಂಡ್ ಬ್ಯಾರಿಯರ್ಸ್' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸಮಸಮಾಜ ನಿರ್ಮಿಸಬೇಕು, ಜಾತಿ ಮುಕ್ತ ಸಮಾಜ ನಿರ್ಮಿಸಬೇಕು ಎಂದು ಹೇಳುತ್ತಿರುತ್ತೇವೆ. ಆದರೆ ಅದಕ್ಕೆ ನಿರ್ದಿಷ್ಟ ಮಾನದಂಡ, ನೀಲಿನಕ್ಷೆ ಇಲ್ಲ. ಹೇಗೆ ನಿರ್ಮಿಸಬೇಕು, ಮನುಷ್ಯರಾಗುವ ಬಗೆ ಹೇಗೆ ಎಂಬುದನ್ನು ಯಾರೂ ಹೇಳಿಕೊಟ್ಟಿಲ್ಲ. ಕ್ರೌರ್ಯ, ಸ್ವಾರ್ಥ ತುಂಬಿರುವ ಸಮಾಜ ಕಾಣುತ್ತಿದ್ದೇವೆ. ಇದನ್ನು ಸರಿಪಡಿಸುವುದಾದರೂ ಹೇಗೆ? ಇಂಥ ಸಮಯದಲ್ಲಿ ಜಿಲ್ಲೆಯಲ್ಲಿ ದಾರಿ ದೀಪ, ಆಶಾಕಿರಣವಾಗಿರುವುದೇ ಅರಿವು ಭಾರತ. ಅರಿವು ಭಾರತ ನಿಂತ ನೀರಾಗಬಾರದು; ಬದಲಾಗಿ ಅದು ಹರಿಯವ ಭಾರತ ಆಗಬೇಕು. ಜಾತಿ ಹೆಸರಲ್ಲಿ ನಡೆಯುತ್ತಿರುವ ದೌರ್ಜನ್ಯಕ್ಕೆ ಒಂದಲ್ಲ ಒಂದು ದಿನ ಅಂತ್ಯ ಸಿಗಲಿದೆ ಎಂದು ಆಶಾವಾದ ವ್ಯಕ್ತಪಡಿಸಿದರು.

ಅರಿವು ಭಾರತ ಒಂದು ತಂಡವಾಗಿ ಕೆಲಸ ಮಾಡಬೇಕು. ಕಾರ್ಯಕ್ರಮ ನಡೆಸಿದ ಬಳಿಕ ಆ ಗ್ರಾಮದಲ್ಲಿನ ಪರಿಣಾಮವನ್ನು ಅಧ್ಯಯನ ಮಾಡಬೇಕು. ಈವರೆಗೆ ಯಾವುದೇ ಗ್ರಾಮ ಅಸ್ಪೃಶ್ಯತೆ ಮುಕ್ತ ಎಂದು ಘೋಷಣೆ ಮಾಡಿಕೊಂಡಿಲ್ಲ. ಒಂದು ಗ್ರಾಮದಲ್ಲಿನ ಒಂದು ಮನೆ ಸರಿ ಹೋದರೆ ಸಾಲದು; ಉಳಿದ ಮನೆಗಳೂ ಸರಿಹೋಗಬೇಕು. ಆಗ ಮಾತ್ರ ಕಾರ್ಯಕ್ರಮ ಯಶಸ್ಸು ಕಾಣುತ್ತದೆ. ಪ್ರತಿ ಗ್ರಾಮರತ್ನರು ಎಲ್ಲಾ ಮನೆಗಳಿಗೆ ಹೋಗಿ ಅರಿವು ಮೂಡಿಸಿ ಅಸ್ಪೃಶ್ಯತೆ ಮುಕ್ತ ಗ್ರಾಮ ಎಂದು ಘೋಷಿಸಬೇಕು. ಮುಂದಿನ 50 ವರ್ಷಗಳ ಮುನ್ನೋಟ ಇರಬೇಕು. ಪ್ರತಿ ಗ್ರಾಮರತ್ನಗಳನ್ನು ಕೋಲಾರ ರತ್ನಗಳನ್ನಾಗಿ ಮಾಡಬೇಕು. ಅವು ಮುಂದೆ ಕರ್ನಾಟಕ ರತ್ನ, ಭಾರತ ರತ್ನಗಳಾಗಬೇಕು ಎಂದು ಸಲಹೆ ನೀಡಿದರು.

ಬೆಂಗಳೂರಿನ ಪ್ರಜಾಪರಿವರ್ತನಾ ಸಂಘಟನೆಯ ಅಧ್ಯಕ್ಷ ಬಿ.ಗೋಪಾಲ್ ಮಾತನಾಡಿ, 'ಅಸ್ಪೃಶ್ಯತೆ ಎನ್ನುವುದು ಸಾವಿರಾರು ವರ್ಷಗಳಿಂದ ಇದೆ, ಈಗಲೂ ತಾಂಡವವಾಡುತ್ತಿದೆ. ನಗರಗಳಲ್ಲಿ ತಿಪ್ಪೆಯನ್ನು ಅಲಂಕಾರ ಮಾಡಿದಂತಿವೆ. ಶ್ರೀಮಂತರು ಪಕ್ಕಾ ಜಾತಿವಾದಿಗಳಾಗಿದ್ದಾರೆ. ಇದನ್ನು ನಿವಾರಣೆ ಮಾಡಲು 100 ವರ್ಷಗಳೇ ಬೇಕು. ಈ ನಿಟ್ಟಿನಲ್ಲಿ ಅರಿವು ಶಿವಪ್ಪ ಅವರಂಥವರು ಪ್ರಯತ್ನ ನಡೆಸಿದ್ದಾರೆ. ಎಲ್ಲಾ ಕಡೆ ಇಂಥ ಪ್ರಯತ್ನ ನಡೆಯಬೇಕಿದೆ' ಎಂದರು.

ಕರ್ನಾಟಕ ಸಾಹಿತ್ಯ ಪರಿಷತ್ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಮಾತನಾಡಿ, 'ಅರಿವು ಭಾರತ ಚಳವಳಿಯ ರೂಪದಲ್ಲಿ ನಡೆಯುತ್ತಿದೆ. ಅಸ್ಪೃಶ್ಯತೆ ಶಾಪವಾಗಿದೆ. ದಲಿತರ ಹಕ್ಕು, ಸಾಮರ್ಥ್ಯ ದಮನ ಮಾಡಲು ಈ ಪಿಡುಗನ್ನು ಇನ್ನೂ ಆಚರಿಸಲಾಗುತ್ತಿದೆ. ಮೂಲನಿವಾಸಿಗಳ ಶಕ್ತಿ, ಪ್ರತಿಭೆ ಹತ್ತಿಕ್ಕುವ ಪ್ರಯತ್ನ ಇದಾಗಿದೆ. ಇದೊಂದು ಅಮಾನವೀಯ ಪದ್ಧತಿ' ಎಂದರು.

ಅರಿವು ಭಾರತ ಸಂಸ್ಥೆಯ ಅರಿವು ಶಿವಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, 'ಅರಿವು ಭಾರತದ 12 ವರ್ಷಗಳ ಮೈಲಿಗಲ್ಲು ನೆನಪಿಸಿಕೊಳ್ಳುವ ಕಾರ್ಯಕ್ರಮವಿದು. ಕರ್ನಾಟಕವಲ್ಲದೇ ಆಂಧ್ರ ಹಾಗೂ ತಮಿಳುನಾಡಿನಲ್ಲೂ 'ಸಮತೆಯ ಟೀ' ಕಾರ್ಯಕ್ರಮ ನಡೆಸಿದ್ದೇವೆ. 400ಕ್ಕೂ ಅಧಿಕ ಹಳ್ಳಿಗಳಲ್ಲಿ ಗೃಹಪ್ರವೇಶ ಕಾರ್ಯಕ್ರಮ ರೂಪಿಸಿದ್ದೇವೆ. ದೇವಸ್ಥಾನ ಪ್ರವೇಶ ಕಾರ್ಯಕ್ರಮ, ಪ್ರತಿಜ್ಞಾವಿಧಿ ನಡೆಸಿದ್ದೇವೆ. 1,300ಕ್ಕೂ ಅಧಿಕ ದೇಗುಲಗಳ ಮುಂದೆ ಮುಕ್ತ ಪ್ರವೇಶದ ಫಲಕ ಹಾಕಿಸಿದ್ದೇವೆ. ಇದಕ್ಕೆ ಜಿಲ್ಲಾಧಿಕಾರಿ ಎಂ.ಆರ್.ರವಿ ನೀಡಿದ ಸಹಕಾರ ಕಾರಣ' ಎಂದರು.

ಈ ಕಾರ್ಯಕ್ರಮದಲ್ಲಿ 'ಗ್ರಾಮರತ್ನ' ಪುರಸ್ಕೃತರನ್ನು ಸನ್ಮಾನಿಸಲಾಯಿತು. ಎಂ.ಆರ್.ರವಿ ರಚಿತ ಅರಿವು ಭಾರತದ ಗೀತೆಯನ್ನು ರಾಜಪ್ಪ ಹಾಡಿದರು. ಭೀಮಸೇನೆ ರಾಜ್ಯ ಅಧ್ಯಕ್ಷ ಪಂಡಿತ್ ಮುನಿವೆಂಕಟಪ್ಪ, ದಲಿತ ಮುಖಂಡ ಟಿ.ವಿಜಯಕುಮಾರ್, ಜನವಾದಿ ಮಹಿಳಾ ಸಂಘಟನೆಯ ವಿ.ಗೀತಾ, ಕಸಾಪ ಜಿಲ್ಲಾಧ್ಯಕ್ಷ ಎನ್.ಬಿ.ಗೋಪಾಲಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಎನ್.ವಿಜಯಲಕ್ಷ್ಮಿ ಇದ್ದರು.



ಕೋಲಾರದಲ್ಲಿ ಭಾನುವಾರ ಅರಿವು ಭಾರತ ಸಂಸ್ಥೆ ಹಮ್ಮಿಕೊಂಡಿದ್ದ 'ಅಸ್ಪೃಶ್ಯತೆ ನಿರ್ಮೂಲನೆಯಲ್ಲಿ 12 ವರ್ಷ– ಒಂದು ಅವಲೋಕನ' ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು

**ಮನುಷ್ಯತ್ವದ ಮೇಲೆ ನಡೆಯುತ್ತಿರುವ ಅತಿ ದೊಡ್ಡ ಅತಿಕ್ರಮಣವೇ ಈ ಅಸ್ಪೃಶ್ಯತೆ. ಈ ಕೊಳಕಿನ ವಿರುದ್ಧ ಮನುಷ್ಯ ಹೆಜ್ಜೆಹೆಜ್ಜೆಗೂ ಹೋರಾಟ ನಡೆಸಬೇಕು**

**ಎಂ.ಆರ್.ರವಿ,** ಜಿಲ್ಲಾಧಿಕಾರಿ

### ಧರ್ಮ ಬದಲಾವಣೆಯಿಂದ ಬುದ್ಧವಾಗಲು ಅಸಾಧ್ಯ

ಕೇವಲ ನನ್ನ ಧರ್ಮವನ್ನು ಬದಲಾಯಿಸಿದ ಮಾತ್ರಕ್ಕೆ ನಾನು ಬುದ್ಧ ಆಗಲು ಸಾಧ್ಯವಿಲ್ಲ. ಸುಲಭವಾಗಿ ಬೌದ್ಧನಾಗಬಹುದು ಆದರೆ ಬುದ್ಧನಾಗುವುದು ಹೇಗೆ? ಅರಿವು, ಪ್ರಜ್ಞೆ, ಜ್ಞಾನ, ತಿಳವಳಿಕೆ ಬಂದರೆ ಮಾತ್ರ ಬುದ್ಧನಾಗಲು ಸಾಧ್ಯ. ಅದಕ್ಕೆ ನಾನು ಎಲ್ಲಿದ್ದರೇನು ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ ಪ್ರಶ್ನಿಸಿದರು.

ಬದುಕುವ ರೂಪದಲ್ಲಿ, ನುಡಿಯುವ ಪದದಲ್ಲಿ ಬುದ್ಧನ ತತ್ವ ಪಾಲಿಸುವುದಾದರೆ ನಾವೂ ಬುದ್ಧರಾಗಬಹುದು ಎಂದರು.

### ಉಪಜಾತಿಗಳ ನಡುವೆ ಮದುವೆ ನಡೆಯಬೇಕು

ಅಂತರ್ಜಾತಿ ವಿವಾಹಗಳು ನಡೆಯುತ್ತಿರುವುದು ಗೊತ್ತಿದೆ ಆದರೆ ಒಂದೇ ಜಾತಿಯ ಉಪಜಾತಿಗಳ ನಡುವೆ ಪರಸ್ಪರ ವಿವಾಹಗಳು ನಡೆಯಬೇಕು ಎಂದು ಎಂ.ಆರ್.ರವಿ ಹೇಳಿದರು.

ಮೊದಲು ನಮ್ಮ ಮನೆಯಲ್ಲಿ, ಅಕ್ಕಪಕ್ಕದ ಮನೆಯಲ್ಲಿ, ನಮ್ಮ ಗ್ರಾಮದಲ್ಲಿ ಬದಲಾವಣೆ ಆದಾಗ ಮಾತ್ರ ಸಮಾಜದಲ್ಲಿ ಬದಲಾವಣೆ ಆಗುತ್ತದೆ. ಆದರೆ, ಒಂದೇ ಜಾತಿಯೊಳಗೆ ನೂರೆಂಟು ಉಪಜಾತಿ ಪಟ್ಟ ಕಟ್ಟಿಕೊಂಡು ತಾನು ಮೇಲು, ನಾನು ಮೇಲು ಎಂದು ಜಗಳವಾಡುತ್ತಿದ್ದೇವೆ. ಇನ್ನು ನಾವು ಯಾವ ಸಮಾಜ ಕಟ್ಟುತ್ತೇವೆ? ಇದು ಆಷಾಢಭೂತಿ ವರ್ತನೆ ಅನಿಸುವುದಿಲ್ಲವೇ ಎಂದರು ಪ್ರಶ್ನಿಸಿದರು.

ಮೊದಲ ವಿರೋಧ ಬರುವುದೇ ಮನೆಯಿಂದ. ಹೀಗಾಗಿ ಮೊದಲು ಮನೆಯಲ್ಲಿ ಅರಿವು ಮೂಡಿಸಬೇಕು. ಇಲ್ಲದಿದ್ದರೆ ಶತಮಾನ ಕಳೆದರೂ ಬದಲಾವಣೆ ಅಸಾಧ್ಯ ಎಂದರು.

Publication Date

# ಕೋಲಾರದಲ್ಲಿ ಪುಟ್ಟ ಮಕ್ಕಳೊಂದಿಗೆ **ಅಂಬೇಡ್ಕರ್ ಜಯಂತಿ ಆಚರಣೆ ಮತ್ತು ಪ್ರತಿಜ್ಞೆ**

ಸುಮಾರು 36 ವರ್ಷಗಳಿಂದ ಕೋಲಾರದ ಮಕ್ಕಳಿಗಾಗಿ ಬೇಸಿಗೆ ಶಿಬಿರ ನಡೆಯುತ್ತಿದೆ. ಡಿ, ಸುಧಾಕರ್ ಎಂಬುವವರು ಆರಂಬಿಸಿದ ಈ ಶಿಬಿರದಲ್ಲಿ ಕೊಕೊ, ಕಬಡ್ಡಿ , ಇತರೆ ಅಥ್ಲೆಟಿಕ್ಸ್ ಅಭ್ಯಾಸ ನಡೆಯುತ್ತದೆ. ಈ ಶಿಬಿರದಲ್ಲಿ ಪ್ರಮುಖ ವ್ಯಕ್ತಿಗಳ ಪರಿಚಯವನ್ನು ಮಾಡಿಸುವ ವಾಡಿಕೆ ಇದೆ. ಈ ವರ್ಷ ಅರಿವು ಭಾರತದ ಕಾರ್ಯಚಟುವಟಿಕೆಗಳನ್ನು ಮಕ್ಕಳಿಗೆ ಪರಿಚಯಿಸಿ ಬಾಬಾ ಸಾಹೇಬ್ ಅಂಬೇಡ್ಕರರ ಬದುಕು ಬರಹದ ವಿಚಾರಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳಲಾಯಿತು. ಜೊತೆಯಲ್ಲಿ ಅಪ್ಪಿ ನಾರಾಯಣಸ್ವಾಮಿ, ಜಯಪ್ರಕಾಶ್, ಪುರುಷೋತ್ತಮ್ ಮತ್ತಿತರರು ಇದ್ದರು.



# ಮಾಲೂರಿನಲ್ಲಿ ಅಂಬೇಡ್ಕರ್ ಜಯಂತಿ: ಸಮಾನತೆ ಮತ್ತು ಸಾಮಾಜಿಕ ಜಾಗೃತಿಗೆ ಕರೆ ನೀಡಿದ ಮುಖ್ಯ ಭಾಷಣ

ಮಾಲೂರು ತಾಲ್ಲೂಕು ಆಡಳಿತ ಏರ್ಪಡಿಸಿದ್ದ ಅಂಬೇಡ್ಕರ್ ಜಯಂತಿಯಲ್ಲಿ ಮುಖ್ಯ ಭಾಷಣಕಾರನಾಗಿ ಸಮಸಮಾಜದ ಕೆಲವು ವಿಷಯಗಳನ್ನು ಹಂಚಿಕೊಂಡ ಸಂದರ್ಭ. ಶಾಸಕರಾದ ನಂಜೆಗೌಡರು, ತಹಶೀಲ್ದಾರರಾದ ರೂಪ ಮತ್ತಿತರರು ಹಾಜರಿದ್ದರು.









ಅರಿವು ಯಾನ

# ದೊಮ್ಮಸಂದ್ರದಲ್ಲಿ ಬುದ್ಧ ಜಯಂತಿ: ಸಮಾನತೆಗಾಗಿ ಸಹಭೋಜನ ಮತ್ತು ಗ್ರಾಮ ರತ್ನ ಪುರಸ್ಕಾರ ಪ್ರದಾನ

02 May 2026




ದೊಮ್ಮಸಂದ್ರ ಗ್ರಾಮದ ನರಸಿಂಹಪ್ಪ ಅವರ ಮನೆಯಲ್ಲಿ ಬುದ್ಧ ಜಯಂತಿ ಮತ್ತು ಸಮಾನತೆಗಾಗಿ ಸಹಭೋಜನ ಏರ್ಪಾಟಾಗಿತ್ತು. ಜಿಲ್ಲಾಧಿಕಾರಿ ಡಾ. ಎಂ. ಆರ್. ರವಿ ಮುಖ್ಯ ಅತಿಥಿಯಾಗಿದ್ದರು. ಅರಿವು ಭಾರತ ತಂಡದ ತಾಯಲೂರು ಸಮಿತಿ ಶ್ರಮವಹಿಸಿ ಏರ್ಪಡಿಸಿದ ಈ ಕಾರ್ಯಕ್ರಮದಲ್ಲಿ ನರಸಿಂಹಪ್ಪ ಮತ್ತು ವೆಂಕಟರವಣಪ್ಪ ಅವರಿಗೆ ಗ್ರಾಮ ರತ್ನ ಪುರಸ್ಕಾರ ನೀಡಿ ಗೌರವಿಸಲಾಯಿತು. ಪಂಡಿತ್ ಮುನಿವೆಂಕಟಪ್ಪ , ಟಿ. ವಿಜಯಕುಮಾರ್, ವಾರಿಧಿ ಮಂಜುನಾಥ ರೆಡ್ಡಿ , ಒಲಿವಿಯಾ ಓಂ ಪ್ರಕಾಶ್, ಡಿ ವಿ ಆರ್ ರಘುಪತಿ ಗೌಡ, ಕೀಳುಹೊಳಲಿ ಸತೀಶ್, ಉಪನ್ಯಾಕ ರಾಮಕೃಷ್ಣ , ಕಸವರೆಡ್ಡಿಹಳ್ಳಿ





ವೆಂಕಟರವಣಪ್ಪ , ಸಂಗಸಂದ್ರ ವಿಜಯಕುಮಾರ್, ಗೋಪಿ ಕರವಿ, ರಾಮಪ್ಪ ಮೊದಲಾದವರು ಭಾಗವಹಿಸಿದ್ದರು.

# ಮಾನವೀಯತೆಯ ದಾರಿಯಲ್ಲಿ ಬುದ್ಧನ ಬೆಳಕು ಮತ್ತು ಜಾತಿರಹಿತ ಸಮಾಜದ ಕನಸು

ದೊಮ್ಮಸಂದ್ರ ಗ್ರಾಮದಲ್ಲಿ

**ಜಿಲ್ಲಾಧಿಕಾರಿ ಡಾ. ಎಂ. ಆರ್. ರವಿ ಅವರ ಮಾತು**

"ದೊಮ್ಮಸಂದ್ರ ಎಂಬ ಈ ಸಣ್ಣ ಗ್ರಾಮಕ್ಕೆ ನಾನು ಮೊದಲ ಬಾರಿಗೆ ಬಂದಿದ್ದೇನೆ. ಈ ರಸ್ತೆಯಲ್ಲಿ ಮೊದಲ ಬಾರಿ ಸಂಚರಿಸುತ್ತಿರುವ ನನಗೆ, ಇಂದಿನ ಈ ಕಾರ್ಯಕ್ರಮ ಕೇವಲ ಒಂದು ಆಚರಣೆಯಂತೆ ಕಾಣುತ್ತಿಲ್ಲ; ಇದು ಮಾನವೀಯತೆಯ ಘನತೆಯನ್ನು ಎತ್ತಿಹಿಡಿಯುವ ಅಪರೂಪದ ಸಂದರ್ಭವಾಗಿ ಕಾಣುತ್ತಿದೆ. ಜಗತ್ತಿನಾದ್ಯಂತ ಬುದ್ಧ ಪೌರ್ಣಿಮೆಯನ್ನು ಆಚರಿಸುತ್ತಿರುವ ಈ ದಿನದಲ್ಲಿ , ಕೋಲಾರ ಜಿಲ್ಲೆಯ ಮುಳಬಾಗಲು ತಾಲೂಕಿನ ಈ ಪುಟ್ಟ ಗ್ರಾಮದಲ್ಲಿ ಜನರು ಪ್ರೀತಿಯಿಂದ, ಅಂತಃಕರಣದಿಂದ ಒಂದಾಗಿ ಸೇರಿರುವುದು ನನ್ನಲ್ಲಿ ಅಪಾರ ಸಂತೋಷ ಮೂಡಿಸಿದೆ. ಮನುಷ್ಯತ್ವ ಮತ್ತು ಸಾಮರಸ್ಯವನ್ನು ಬದುಕಿನ ಮೌಲ್ಯವಾಗಿ ಆಚರಿಸುತ್ತಿರುವ ಈ ಮನೋಭಾವವೇ ಇಂದಿನ ಸಮಾಜಕ್ಕೆ ಅತ್ಯಂತ ಅಗತ್ಯವಾಗಿದೆ.

ಇಂದಿನ ಸಮಾಜವನ್ನು ನೋಡಿದಾಗ ಒಂದು ಪ್ರಶ್ನೆ ನನ್ನ ಮನಸ್ಸನ್ನು ಮರುಮರು ಕಾಡುತ್ತದೆ. ಶಿಕ್ಷಣ ನಮಗೆ ಏನು ಕೊಡುತ್ತಿದೆ? ನಾವು ಹೆಚ್ಚು ಹೆಚ್ಚು ವಿದ್ಯಾವಂತರಾಗುತ್ತಿದ್ದೇವೆ, ಪದವಿಗಳು ಹೆಚ್ಚುತ್ತಿವೆ, ಉದ್ಯೋಗಗಳು ಹೆಚ್ಚುತ್ತಿವೆ; ಆದರೆ ಮನುಷ್ಯತ್ವ ಹೆಚ್ಚುತ್ತಿದೆಯೇ? ನಮ್ಮ ಶಿಕ್ಷಣ ವ್ಯವಸ್ಥೆ ಮನುಷ್ಯನ ಹೃದಯವನ್ನು ಅರಳಿಸುವ ಬದಲು, ಕೆಲವೊಮ್ಮೆ ಅಹಂಕಾರ ಮತ್ತು ಸ್ವಾರ್ಥವನ್ನು ಬೆಳೆಸುತ್ತಿರುವಂತಿದೆ. ಹಳ್ಳಿಯಿಂದ ಬಂದ ತಂದೆ-ತಾಯಿಯನ್ನು ತಮ್ಮವರು ಎಂದು ಹೇಳಿಕೊಳ್ಳಲು ಕೂಡ ಕೆಲವರು ಹಿಂಜರಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಶಿಕ್ಷಣವು ಕೇವಲ ಪ್ರಮಾಣಪತ್ರ ನೀಡುವ ಯಂತ್ರವಾಗಬಾರದು; ಅದು ವ್ಯಕ್ತಿತ್ವವನ್ನು ರೂಪಿಸುವ ಶಕ್ತಿಯಾಗಬೇಕು. ಮನುಷ್ಯನೊಳಗಿನ ಸಂವೇದನೆ, ಪ್ರೀತಿ ಮತ್ತು ಹೊಣೆಗಾರಿಕೆಯನ್ನು ಬೆಳೆಸುವ ಕೆಲಸ ಮಾಡಬೇಕು. ಆದರೆ ಆ ಕೆಲಸದಲ್ಲಿ ನಾವು ಹಿಂದೆ ಬೀಳುತ್ತಿದ್ದೇವೆ ಎಂಬ ನೋವು ನನ್ನೊಳಗಿದೆ.



ಒಮ್ಮೆ ನಾವು ಪ್ರಾಣಿಗಳನ್ನು ಗಮನಿಸಬೇಕು. ಅವುಗಳಿಗೆ ಶಾಲೆಗಳಿಲ್ಲ, ಕಾಲೇಜುಗಳಿಲ್ಲ, ವಿಶ್ವವಿದ್ಯಾಲಯಗಳಿಲ್ಲ. ಆದರೂ ಅವು ಪರಸ್ಪರ ಸಹಕಾರದಿಂದ ಬದುಕುತ್ತವೆ. ಅವುಗಳ ನಡುವೆ ಮೇಲು-ಕೀಳು ಎಂಬ ಭಾವನೆ ಇಲ್ಲ. ಆದರೆ ಸಂಸ್ಕೃತಿ ಮತ್ತು ನಾಗರಿಕತೆಯ ಹೆಮ್ಮೆ ಪಡುವ ಮನುಷ್ಯ ಮಾತ್ರ "ನಾನು ಶ್ರೇಷ್ಠ, ನೀನು ಕನಿಷ್ಠ" ಎಂಬ ಅಹಂಕಾರದಲ್ಲಿ ಬದುಕುತ್ತಿದ್ದಾನೆ. ಒಬ್ಬ ಮನುಷ್ಯನನ್ನು ಕೇವಲ ಅವನು ಹುಟ್ಟಿದ ಜಾತಿಯ ಕಾರಣಕ್ಕೆ ಅವಮಾನಿಸುವುದು, ಅವನನ್ನು ಕೀಳಾಗಿ ನೋಡುವುದು, ಅವನಿಗೆ ಮಾನವೀಯ ಗೌರವ ಕೊಡದೆ ಬದುಕುವುದು — ಇದು ಕೇವಲ ಸಂವಿಧಾನ ವಿರೋಧಿ ನಡೆ ಅಲ್ಲ; ಇದು ಮನುಷ್ಯತ್ವದ ವಿರುದ್ಧದ ಅಪರಾಧ.

ಈ ದೇಶದಲ್ಲಿ ಜಾತಿ ಎನ್ನುವ ರೋಗ ಎಷ್ಟು ಆಳವಾಗಿ ಬೆಳೆದಿದೆ ಎಂಬುದನ್ನು ಯೋಚಿಸಿದಾಗ ನೋವಾಗುತ್ತದೆ. ಜಗತ್ತಿನ ಅನೇಕ ದೇಶಗಳಲ್ಲಿ ಕಾಣದ ಈ ಕಾಯಿಲೆ ನಮ್ಮ

ಸಮಾಜದಲ್ಲಿ ಮಾತ್ರ ಇನ್ನೂ ಜೀವಂತವಾಗಿದೆ. ಸಾವಿರಾರು ವರ್ಷಗಳಿಂದ ಬಂದಿರುವ ಈ ಮನೋಭಾವನೆ ಮನುಷ್ಯರನ್ನು ಪರಸ್ಪರ ದೂರ ಮಾಡುತ್ತಿದೆ. ಇದೇ ಸಂದರ್ಭದಲ್ಲಿ ನನಗೆ ಬುದ್ಧನ ನೆನಪು ಬರುತ್ತದೆ. 2500 ವರ್ಷಗಳ ಹಿಂದೆ ಒಬ್ಬ ರಾಜಕುಮಾರನ ಮನಸ್ಸಿನಲ್ಲಿ ಒಂದು ಪ್ರಶ್ನೆ ಹುಟ್ಟಿತು — "ಜನರು ಯಾಕೆ ಇಷ್ಟು ದುಃಖದಲ್ಲಿದ್ದಾರೆ? ಯಾಕೆ ಅನ್ಯಾಯ, ಹಿಂಸೆ, ಶೋಷಣೆ ಇಷ್ಟೊಂದು ಇದೆ?" ಎಂಬ ಪ್ರಶ್ನೆ. ಆ ಪ್ರಶ್ನೆಯೇ ಸಿದ್ಧಾರ್ಥನನ್ನು ಬುದ್ಧನನ್ನಾಗಿ ರೂಪಿಸಿತು.

ಬುದ್ಧನ ಮಹತ್ವ ಏನೆಂದರೆ, ಆತ ಮನುಷ್ಯನ ಬದುಕಿನ ಸುತ್ತ ಮಾತ್ರ ಮಾತನಾಡಿದ. ದೇವರ ಬಗ್ಗೆ ಗೊತ್ತಿಲ್ಲದ ವಿಚಾರಗಳನ್ನು ಹೇಳಲಿಲ್ಲ. "ನನಗೆ ಗೊತ್ತಿಲ್ಲದ ವಿಷಯದ ಬಗ್ಗೆ ನಾನು ಸುಳ್ಳು ಹೇಳುವುದಿಲ್ಲ" ಎಂಬ ನಿಲುವು ಅವನದು. ಮನುಷ್ಯನ ದುಃಖ, ನೋವು, ಸಂಕಟ ಮತ್ತು ಅದರಿಂದ ಹೊರಬರುವ ದಾರಿ — ಇವೆಲ್ಲದರ ಬಗ್ಗೆ ಆತ ಯೋಚಿಸಿದ. ಸತ್ಯ, ನೈತಿಕತೆ ಮತ್ತು ಆತ್ಮಪರಿಶೀಲನೆಯ ಬದುಕನ್ನು ಆತ ಬೋಧಿಸಿದ. ಬುದ್ಧನ ಮಾರ್ಗ ಎಂದರೆ ಸತ್ಯದ ಮಾರ್ಗ; ಅದು ಆತ್ಮಶುದ್ಧಿಯ ಮಾರ್ಗ. ಮನುಷ್ಯನೊಳಗಿನ ಕತ್ತಲೆಯನ್ನು ದೂರ ಮಾಡಿ ಬೆಳಕಿನ ಕಡೆಗೆ ಕರೆದೊಯ್ಯುವ ದಾರಿ.

ಇಂದು ನಾವು ದೇವರು, ಧರ್ಮ, ಆಚರಣೆಗಳ ಬಗ್ಗೆ ಬಹಳ ಮಾತನಾಡುತ್ತೇವೆ. ಆದರೆ ಮನುಷ್ಯನ ಬಗ್ಗೆ ಎಷ್ಟು ಮಾತನಾಡುತ್ತೇವೆ? ಮನೆಗೆ ನಾಯಿಗಳನ್ನು, ಬೆಕ್ಕುಗಳನ್ನು ಒಳಗೆ ಬಿಡುತ್ತೇವೆ; ಆದರೆ ಜಾತಿಯ ಕಾರಣಕ್ಕೆ ಒಬ್ಬ ಮನುಷ್ಯನನ್ನು ಮನೆಗೆ ಬರಲು ಬಿಡುವುದಿಲ್ಲ. ಇದು ಎಂತಹ ವಿಚಿತ್ರ ಮನೋಭಾವನೆ! ಎಲ್ಲರೂ ಒಂದೇ ಗರ್ಭದಿಂದ ಹುಟ್ಟಿದವರು. ಹಾಗಿದ್ದಾಗ ಯಾರು ಶ್ರೇಷ್ಠರು? ಯಾರು ಕೀಳು? ಹುಟ್ಟಿನ ಆಧಾರದ ಮೇಲೆ ಮನುಷ್ಯನನ್ನು ಅಳೆಯುವ ಮನೋಭಾವನೆ ಸಂಪೂರ್ಣ ತಪ್ಪು. ದಾಸರು ಹೇಳಿದಂತೆ, "ಕುಲ ಕುಲ ಎಂದು ಹೊಡೆದಾಡಬೇಡಿ" ಎಂಬ ಮಾತು ಇಂದಿಗೂ ಅತ್ಯಂತ ಪ್ರಸ್ತುತವಾಗಿದೆ.

ಸಮಾಜದಲ್ಲಿ ಬದಲಾವಣೆ ಬರಬೇಕಾದರೆ ಅದು ನಮ್ಮ ಮನೆಯಿಂದಲೇ ಆರಂಭವಾಗಬೇಕು. ಸಾವಿರ ಮೈಲಿಗಳ ಪ್ರಯಾಣವೂ ಒಂದು ಸಣ್ಣ ಹೆಜ್ಜೆಯಿಂದಲೇ ಪ್ರಾರಂಭವಾಗುತ್ತದೆ. ನಾವು ಮೊದಲು ನಮ್ಮ ಮನೆಯವರ ಮನಸ್ಸನ್ನು ಬದಲಾಯಿಸಬೇಕು. ಜಾತಿಯ ಹೆಸರಿನಲ್ಲಿ ದ್ವೇಷವನ್ನು ಮುಂದುವರಿಸುವ ಬದಲು, ಪ್ರೀತಿ ಮತ್ತು ಬಂಧುತ್ವವನ್ನು ಬೆಳೆಸಬೇಕು. ಅರಿವು ಭಾರತ ಮಾಡುತ್ತಿರುವ ಕೆಲಸ ನನಗೆ ಈ ಕಾರಣಕ್ಕೇ ಮಹತ್ವದಂತೆ ಕಾಣುತ್ತದೆ. ಮನೆಮನೆಗೆ ತೆರಳಿ ಸಾಮರಸ್ಯದ ಬೀಜ ಬಿತ್ತುವ ಕೆಲಸ ಸುಲಭವಲ್ಲ, ಆದರೆ ಇದೇ ನಿಜವಾದ ಸಾಮಾಜಿಕ ಪರಿವರ್ತನೆಗೆ ದಾರಿ ಮಾಡಿಕೊಡುತ್ತದೆ.

ಜಾತಿರಹಿತ ಸಮಾಜದ ಬಗ್ಗೆ ಮಾತನಾಡುವ ನಾವು, ಜಾತಿಗಳೊಳಗಿನ ಉಪಜಾತಿಗಳ ನಡುವಿನ ಗೋಡೆಗಳನ್ನು ಕೂಡ ಒಡೆದು ಹಾಕಬೇಕಿದೆ. ಅಂತರ್ಜಾತಿ ವಿವಾಹಗಳ ಬಗ್ಗೆ ಮಾತನಾಡುವುದಷ್ಟೇ ಸಾಕಾಗುವುದಿಲ್ಲ; ಉಪಜಾತಿಗಳ ನಡುವಿನ ವೈಷಮ್ಯವೂ ದೂರವಾಗಬೇಕು. ನಾನು ನನ್ನ ಬದುಕಿನಲ್ಲಿ ಜಾತಿಗೆ ಮಹತ್ವ ಕೊಡಲಿಲ್ಲ. ನನ್ನ ಮಕ್ಕಳ ವಿವಾಹದ ಸಂದರ್ಭದಲ್ಲೂ ನಾನು ಜಾತಿಯನ್ನು ಕೇಳಲಿಲ್ಲ. ಒಬ್ಬ ಒಳ್ಳೆಯ ಮನುಷ್ಯ ಅಥವಾ ಒಳ್ಳೆಯ ಹೆಣ್ಣುಮಗಳು ನಮ್ಮ ಮನೆಗೆ ಬಂದರೆ ಸಾಕು; ಅವರ ಜಾತಿಯನ್ನು ತಿಳಿದು ನಾನು ಏನು ಮಾಡಬೇಕು? ಮನುಷ್ಯನ ಮೌಲ್ಯ ಅವನ ಗುಣದಿಂದ ನಿರ್ಧಾರವಾಗಬೇಕು, ಹುಟ್ಟಿನಿಂದಲ್ಲ.

ಬುದ್ಧ, ಬಸವಣ್ಣ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನಗಳನ್ನು ನೋಡಿದರೆ, ಅವರು ಸಮಾಜದ ವಿರೋಧ, ಅವಮಾನ ಮತ್ತು ಹಿಂಸೆಗಳ ನಡುವೆಯೂ ಸಮಾನತೆಯ ಪರವಾಗಿ ನಿಂತವರು. ಅವರ ಹೋರಾಟ ನಮಗೆ ಒಂದು ಪಾಠ ಕಲಿಸುತ್ತದೆ — ನಿಜವಾದ ಬದಲಾವಣೆ ಎಂದಿಗೂ ಸುಲಭವಲ್ಲ, ಆದರೆ ಮನುಷ್ಯತ್ವದ ಮೇಲಿನ ನಂಬಿಕೆ ಕಳೆದುಕೊಳ್ಳಬಾರದು. ಸಮಾಜದಲ್ಲಿ ಇನ್ನೂ ಒಳ್ಳೆಯವರು

ಇದ್ದಾರೆ. ಪ್ರೀತಿ, ಸಾಮರಸ್ಯ ಮತ್ತು ಬಂಧುತ್ವವನ್ನು ನಂಬುವ ಜನರು ಇನ್ನೂ ಇದ್ದಾರೆ. ಆ ಒಳ್ಳೆಯತನವನ್ನು ಹುಡುಕಿ ಬೆಳೆಸುವ ಕೆಲಸವೇ ನಮ್ಮ ಹೊಣೆಗಾರಿಕೆ.

ಕೊನೆಗೆ, ನಾನು ನಂಬುವುದೇನಂದರೆ ಸಮಾಜದ ಉದ್ಧಾರ ಹೊರಗಿನಿಂದ ಬರುವುದಿಲ್ಲ, ಅದು ನಮ್ಮೊಳಗಿಂದಲೇ ಆರಂಭವಾಗಬೇಕು. ನನ್ನ ಮನಸ್ಸು ಶುದ್ಧವಾದಾಗ, ನನ್ನ ಹೃದಯ ಪ್ರೀತಿಯಿಂದ ತುಂಬಿದಾಗ, ನಾನು ಮತ್ತೊಬ್ಬ ಮನುಷ್ಯನನ್ನು ಗೌರವದಿಂದ ನೋಡಲು ಕಲಿತಾಗ ಮಾತ್ರ ನಿಜವಾದ ಬದಲಾವಣೆ ಸಾಧ್ಯ. ಬುದ್ಧನ ಮಾರ್ಗ ಎಂದರೆ ಇದೇ — ಆತ್ಮಪರಿಶೀಲನೆಯ ಮೂಲಕ ಮಾನವೀಯತೆಯತ್ತ ಸಾಗುವ ದಾರಿ. ಆ ದಾರಿಯಲ್ಲಿ ನಡೆಯುವ ಮೂಲಕವೇ ನಾವು ಬುದ್ಧನಿಗೂ, ಬಸವಣ್ಣನಿಗೂ, ಅಂಬೇಡ್ಕರ್ ಅವರಿಗೂ ನಿಜವಾದ ಗೌರವ ಸಲ್ಲಿಸಬಹುದು.

"ಅಸ್ಪೃಶ್ಯತೆಯ ನಿರ್ಮೂಲನೆ ಅಹಿಂಸೆಯ ಅತ್ಯುನ್ನತ ರೂಪವಾಗಿದೆ"

- ಮಹಾತ್ಮ ಗಾಂಧಿ

## ಆನೆಕಲ್ ಜೈಭೀಮ್ ಭವನದಲ್ಲಿ 'ಅರಿವು ಭಾರತ' ಪರಿಚಯ ಕಾರ್ಯಕ್ರಮ : ಸಮಾನತೆ, ಸೋದರತ್ವ ಮತ್ತು ಸಾಮಾಜಿಕ ಪರಿವರ್ತನೆಗೆ ಮುಖಂಡರ ಸಂಕಲ್ಪ


ಆನೆಕಲ್ ಪಟ್ಟಣದ ಜೈಭೀಮ್ ಭವನದಲ್ಲಿ ಹಿರಿಯ ನಾಯಕ ಬಿ.ಗೋಪಾಲ್ ನೇತೃತ್ವದಲ್ಲಿ ನಡೆದ ಅರಿವು ಭಾರತ ಪರಿಚಯ ಕಾರ್ಯಕ್ರಮ. ಹಿರಿಯರಾದ ಟಿ ವಿಜಯಕುಮಾರ್, ಪಂಡಿತ್ ಮುನಿವೆಂಕಟಪ್ಪ, ಓಂ ಪ್ರಕಾಶ್, ವೆಂಕಟಾಚಲಪತಿ, ಮೂಕಾಂಬಿಕಾ ಜೊತೆಗೆ ಬೆಂಗಳೂರಿನ ಅನೇಕ ಮುಖಂಡರು ಭಾಗವಹಿಸಿದ್ದರು





ಆನೆಕಲ್ ಜೈ ಭೀಮ್ ಭವನದಲ್ಲಿ

**ಬಿ. ಗೋಪಾಲ್ ಅವರ ಮಾತು**



"ಇದು ಅತ್ಯಂತ ಮಹತ್ವದ ಕಾರ್ಯಕ್ರಮ. ಪ್ರೊಫೆಸರ್ ಶಿವಪ್ಪನವರು ತಮ್ಮ ಮನೆಯಿಂದಲೇ ಆರಂಭಿಸಿದ ಈ ಚಳುವಳಿಯನ್ನು, ತಮ್ಮ ಊರಿನಿಂದ ಪ್ರಾರಂಭಿಸಿ ಜಿಲ್ಲೆಯ ಹಲವು ಹಳ್ಳಿಗಳವರೆಗೆ "ಅಸ್ಪೃಶ್ಯ ಮುಕ್ತ ಭಾರತ" ಎಂಬ ಸಂದೇಶದೊಂದಿಗೆ ಕೊಂಡೊಯ್ದಿದ್ದಾರೆ.

ಇದೀಗ ನಮ್ಮ ನ್ಯಾಯಮೂರ್ತಿಯವರೂ ಹೇಳಿದಂತೆ, ಕಾನೂನನ್ನು ಬಳಸಿಕೊಳ್ಳಬೇಕು. ಆದರೆ ಕೇವಲ ಕಾನೂನಿನಿಂದ ಮಾತ್ರ ಸಮಾಜ ಪರಿವರ್ತನೆ ಸಾಧ್ಯವಿಲ್ಲ. ನಾವು ವರ್ಷಗಳಿಂದ ಕಾನೂನುಗಳನ್ನು ಬಳಸಿದ್ದೇವೆ; ಕೆಲವರು ಸುಧಾರಿಸಿಕೊಂಡಿದ್ದಾರೆ, ಕೆಲವರು ಮತ್ತೆ ಅದೇ ಮನೋಭಾವಕ್ಕೆ ಮರಳಿದ್ದಾರೆ. ಇದರಿಂದ ತಿಳಿಯುವುದು — ಸಮಾಜ ಬದಲಾಗಬೇಕಾದರೆ ಮನಸ್ಸು ಬದಲಾಗಬೇಕು.

ಶಿವಪ್ಪನವರ ಈ ಪ್ರಯತ್ನದಲ್ಲಿ ಬುದ್ಧನ ತತ್ವ ಇದೆ — ಪ್ರೀತಿ, ಸೋದರತ್ವ ಮತ್ತು ಮಾನವೀಯತೆ ಇದೆ. ಹಿಂದೆ ಕೆಲವು



ಸಮುದಾಯದ ಕಲಾವಿದರನ್ನು ಮನೆಯೊಳಗೆ ಬರಲು ಬಿಡದ ಪರಿಸ್ಥಿತಿ ಇತ್ತು. ಆದರೆ ಶಿವಪ್ಪನವರು, "ಅವರೂ ನಮ್ಮಂತೆಯೇ ಮನುಷ್ಯರು" ಎಂದು ಮನವರಿಕೆ ಮಾಡಿದರು. ಹಾಡು ಕೇಳುವಾಗ ಜಾತಿ ಕಾಣುವುದಿಲ್ಲ ; ಮಾನವೀಯತೆಯೇ ಕಾಣುತ್ತದೆ ಎಂಬ ಸಂದೇಶವನ್ನು ನೀಡಿದರು. ನಂತರ ಆ ಕಲಾವಿದರನ್ನು ಮನೆ ಒಳಗೆ ಕರೆಸಿ ಊಟ ಮಾಡಿಸಲಾಯಿತು. ಅಲ್ಲಿಂದಲೇ ಒಂದು ಗ್ರಾಮದ ಪರಿವರ್ತನೆ ಆರಂಭವಾಯಿತು. ಭಗವಾನ್ ಬುದ್ಧರ ಜೀವನದಲ್ಲಿಯೂ ಇದೇ ಸಂದೇಶ ಕಾಣುತ್ತದೆ. ಸಮಾಜ ತಳ್ಳಿಹಾಕಿದ್ದ ಒಬ್ಬ ಅಸ್ಪೃಶ್ಯನನ್ನು ಬುದ್ಧರು ಸ್ವತಃ ಆರೈಕೆ ಮಾಡಿ ಉಳಿಸಿದರು. ಅದರಿಂದ ಅವರು ಕೇವಲ ದಯೆ ತೋರಿಸಲಿಲ್ಲ ; "ಪ್ರತಿಯೊಬ್ಬ ಮನುಷ್ಯನಿಗೂ ಗೌರವ ಮತ್ತು ಬದುಕುವ ಹಕ್ಕಿದೆ" ಎಂಬ ಮಹತ್ವದ ಸಂದೇಶ ನೀಡಿದರು. ಅರಿವು ಶಿವಪ್ಪನವರ ಕಾರ್ಯವೂ ಇದೇ ದಾರಿಯಲ್ಲಿ ಸಾಗುತ್ತಿದೆ. ಅವರು ಕೇವಲ ಭಾಷಣ ಮಾಡುತ್ತಿಲ್ಲ ; ಮನೆ ಮನೆಗೆ ಹೋಗಿ ಸೋದರತ್ವದ ಸಂದೇಶವನ್ನು ತಲುಪಿಸುತ್ತಿದ್ದಾರೆ. ದೇವಸ್ಥಾನ ಪ್ರವೇಶದಿಂದ ಹಿಡಿದು ಕಟಿಂಗ್ ಶಾಪ್‌ಗಳವರೆಗೆ, ಎಲ್ಲ ಕಡೆ ಸಂವಾದದ ಮೂಲಕ ಪರಿವರ್ತನೆ ತರಲು ಪ್ರಯತ್ನಿಸಿದ್ದಾರೆ.

ನಾವು ಅನೇಕ ಹೋರಾಟಗಳ ಮೂಲಕ ಜನರಿಗೆ ಜಮೀನು, ಸೈಟ್, ಸೌಲಭ್ಯಗಳನ್ನು ಕೊಡಿಸಿದ್ದೇವೆ. ಆದರೆ ನಿಜವಾದ ಪರಿವರ್ತನೆ ಮನಸ್ಸಿನಲ್ಲಿ ಆಗಬೇಕು. ಹಣ ಅಥವಾ ಆಸ್ತಿ ಮಾತ್ರ ಸಮಾಜ ಬದಲಾಯಿಸುವುದಿಲ್ಲ ; ಮಾನವೀಯತೆ ಮತ್ತು ಅರಿವು ಸಮಾಜವನ್ನು ಬದಲಾಯಿಸುತ್ತದೆ.

ಇಂದು ಸಾವಿರಾರು ಜಾತಿಗಳಿರುವ ಈ ದೇಶದಲ್ಲಿ ಇನ್ನೂ ತಾರತಮ್ಯ ಇದೆ. ಆದರೂ ಸಮಾಜ ನಿಧಾನವಾಗಿ ಬದಲಾಗುತ್ತಿದೆ. ಆ ಬದಲಾವಣೆಗೆ ಇನ್ನಷ್ಟು ಬಲ ನೀಡಬೇಕು. ಪ್ರೊಫೆಸರ್ ಶಿವಪ್ಪನವರು ಕಳೆದ 12 ವರ್ಷಗಳಿಂದ ನಿರಂತರವಾಗಿ ಈ ಕೆಲಸ ಮಾಡುತ್ತಿದ್ದಾರೆ. ಕುಟುಂಬದ ಸುಖವನ್ನೂ ಬದಿಗಿಟ್ಟು ಸಮಾಜ ಪರಿವರ್ತನೆಗಾಗಿ ಶ್ರಮಿಸುತ್ತಿದ್ದಾರೆ. ಇಂತಹ ನೂರು ಶಿವಪ್ಪನವರು ಈ ರಾಜ್ಯದಲ್ಲಿ ಹುಟ್ಟಿದರೆ, ಅಸ್ಪೃಶ್ಯತೆಯಿಲ್ಲದ ಸಮಾಜ ನಿರ್ಮಾಣ ಖಂಡಿತ ಸಾಧ್ಯ.

ಭಗವಾನ್ ಬುದ್ಧರ ಪಂಚಶೀಲ ತತ್ವಗಳು ಇಂದಿಗೂ ಪ್ರಸ್ತುತ — ಸುಳ್ಳು ಹೇಳಬಾರದು, ಹಿಂಸೆ ಮಾಡಬಾರದು, ಕಳವು ಮಾಡಬಾರದು, ಮದ್ಯಪಾನದಿಂದ ದೂರ ಇರಬೇಕು ಮತ್ತು ಸತ್ಮಾರ್ಗದಲ್ಲಿ ಬದುಕಬೇಕು. 2500 ವರ್ಷಗಳ ಹಿಂದೆ ಬುದ್ಧರು ಹೇಳಿದ ಈ ತತ್ವಗಳನ್ನೇ ಇಂದು ಜಗತ್ತಿನ ಅನೇಕ ದೇಶಗಳು ಕಾನೂನಿನ ರೂಪದಲ್ಲಿ ಅನುಸರಿಸುತ್ತಿವೆ.

ಇಂದು ಅಗತ್ಯವಿರುವುದು ಕೇವಲ ಕಾನೂನು ಭಯವಲ್ಲ ; ಮಾನವೀಯತೆಯ ಅರಿವು. ಪ್ರತಿ ಜಿಲ್ಲೆಯಲ್ಲಿ ಶಿವಪ್ಪನವರಂತಹ ಕೆಲವರು ಸತತವಾಗಿ ಕೆಲಸ ಮಾಡಿದರೆ, ಜಾತಿ ಮುಕ್ತ ಮತ್ತು ಸಮಾನತೆಯ ಸಮಾಜ ನಿರ್ಮಾಣ ಅಸಾಧ್ಯವಲ್ಲ.

ಆದ್ದರಿಂದ, ನಾವು ಎಲ್ಲರೂ ಸೇರಿ ಸೋದರತ್ವ , ಸಮಾನತೆ ಮತ್ತು ಮಾನವೀಯತೆಯ ಈ ಕಾರ್ಯವನ್ನು ಮುಂದುವರಿಸಬೇಕು. ಪ್ರೊಫೆಸರ್ ಶಿವಪ್ಪನವರಂತಹವರ ಹಾದಿಯಲ್ಲಿ ನಡೆದರೆ, ಸಮಾಜದಲ್ಲಿ ನಿಜವಾದ ಪರಿವರ್ತನೆ ತರಲು ಸಾಧ್ಯ.





# ಸೋಮಸುಂದರ್ ರೆಡ್ಡಿ ಅವರ ಮನೆಯಲ್ಲಿ ಸಮಾನತೆಗಾಗಿ **ಸಹಭೋಜನ**

KGF ತಾಲೂಕಿನ ಕ್ಯಾಸಂಬಳ್ಳಿ ಗ್ರಾಮದ ಸೋಮಸುಂದರ್ ರೆಡ್ಡಿ ಅವರ ಮನೆಯಲ್ಲಿ ಸಮಾನತೆಗಾಗಿ ಸಹಭೋಜನದಲ್ಲಿ ಜಿಲ್ಲಾಧಿಕಾರಿ ಡಾ ಎಂ ಆರ್ ರವಿ, DySP ಲಕ್ಷ್ಮಯ್ಯ, ತಹಶಿಲ್ದಾರ್ ಭರತ್ ಸೇರಿದಂತೆ ಸ್ಥಳೀಯರ ಜೊತೆ ಅರಿವು ಭಾರತ ತಂಡ ಭಾಗಿಯಾಗಿತ್ತು.




















# ಅರಿವು ಭಾರತ
# ಆಶಯಗೀತೆ

ಜಾತಿಯ ರಣ ಬಿಸಿಲು
ಸುಡುತಿರಲು ಒಡಲು
ಬೀಸಿದೆ ತಂಗಾಳಿ ಎಲ್ಲೆಡೆಗೆ
ಬಂಧುತ್ವದೆಡೆಗೆ ಅರಿವು ಭಾರತದೆಡೆಗೆ

ಶತಮಾನಗಳ ಮಡುಗಟ್ಟಿದ
ದುಗುಡ ಸರಿಯಲಿ ದೂರ
ಕದವ ತಟ್ಟಿ ಮನವ ಮುಟ್ಟಿ
ಹಟ್ಟಿ ಪ್ರವೇಶ ಮಾಡುತಾ
ಸಾಗಿದೆ ಅರಿವು ಭಾರತದ
ಸಮಸಮತೆಯ ತೇರು

ಭೇದ ಭಾವ ತೋರದೆ
ಮೇಲು ಕೀಳು ಎನಿಸದೆ
ಬೆಳಗಲಿ ಮನ ಮನೆಗಳು
ಅಕ್ಕರೆ ಮಾತಿಗೆ ಸಕ್ಕರೆ ಸೇರಿ
ಆಗದೇನು ಸಹ ಭೋಜನ
ಅಮೃತ ಭೋಜನ

ಹೊಸ ಮನ್ವಂತರ ಬಂದಿದೆ
ಜಾತಿ ನಾಶ ಶತಸಿದ್ಧ ಎಂದಿದೆ
ದಮನಿತರ ಆರ್ತನಾದ
ಯುವ ಜನರ ಕಣ್ಣು ತೆರೆಸುತಾ
ಕ್ರಮಿಸಿದೆ ಅರಿವು ಭಾರತದೆಡೆಗೆ
ಜ್ಯೋತಿ ಯಾವ ಜಾತಿ ಎನ್ನುತಾ

**- ಡಾ. ಎಂ. ಆರ್. ರವಿ**
**ಜಿಲ್ಲಾಧಿಕಾರಿಗಳು, ಕೋಲಾರ**



ಅರಿವು ಭಾರತ

Arivu Bharat
1st Main Road,
Muneshwara Nagar
Kolar – 563101
Ph: 9448663904, 9449652631
www.arivubharat.com